ಕಾನನ

ಮೇ-2023

ನಿಸರ್ಗದೆಡೆಗೆ ಪಯಣ

WCG
Wildlife Conservation Group

ಕಾನನ

ನಿಸರ್ಗದೆಡೆಗೆ ಪಯಣ

ಮುಖಪುಟ

ನೀಲಗಿರಿ ಲಾಂಗೂರ್

© ಭಗವತಿ ಬಿ. ಎಮ್.

ಮೇ–2023

WCG
Wildlife Conservation Group

ಲೇಖನಗಳು

* ಕಾಡ ಒಡಲ ಬೆಂಕಿ ಬದುಕ ಸುಡದಿರುವುದೇ? – ಶ್ರೀಕಾಂತ್ ಎ. ವಿ.
* ಕಾಡಿನ ಕಥೆ – ಶಂಕರ್ ಹೆಬ್ಬೆ
* ಮಗುವಿನೊಂದಿಗೆ ಲಿಂಗಾಂಬುದಿ ಕೆರೆಯಲೊಂದು ಸುತ್ತು – ಡಾ. ದೀಪಕ್ ಭ., ಮೈಸೂರು
* ಮಡಕೆ ಮಾಡುವ ಹುಳು (ಕೀಟದ ನಂಟು) – ಅನುಪಮಾ ಕೆ. ಬೆಣಚಿನಮರ್ಡಿ
* ಅಲೆಮಾರಿಯ ಅನುಭವಗಳು – ೧೧ – ಮೌನೇಶ ಕನಸುಗಾರ
* ನಾಯಕನೋ..? ಏಕಾಂಗಿಯೋ..? (ವಿವಿ ಅಂಕಣ) – ಜೈಕುಮಾರ್ ಆರ್.
* ಅರಣ್ಯ ರಕ್ಷಕ (ಕವನ) – ಲಿಂಗರಾಜ ಎಮ್.
* ಪ್ರಕೃತಿ ಬಿಂಬ – ಗುರುಪ್ರಸಾದ್ ಕೆ. ಆರ್., ದೀಪ್ತಿ ಎನ್.

ವಿನ್ಯಾಸ

ಧನರಾಜ್ ಎಂ.

ಮುಖಪುಟ ಛಾಯಾಚಿತ್ರ

ವಿನೀತ್ ಕರ್ಥ

ಪರಿಷ್ಕರಣೆ

ಮುರಳಿ ಎಸ್.

ಡಾ. ಮಧುಸೂಧನ ಹೆಚ್. ಸಿ.

© ಹಯಾತ್ ಮೊಹಮ್ಮದ್

ಕಾಡ್ಗಿಚ್ಚಿನಿಂದ ಕಾಡನ್ನು ರಕ್ಷಿಸಲು ಹಗಲು ಇರುಳೆನ್ನದೆ ಸೆಣಸಾಡುತ್ತಿರುವ
ಅರಣ್ಯ ಸಿಬ್ಬಂದಿಗಳಿಗೆ ಈ ತಿಂಗಳ ಕಾನನ ಪ್ರತಿಯು ಅರ್ಪಿತ.
© ಧನರಾಜ್ ಎಂ.

ಕಾಡ ಒಡಲ ಬೆಂಕಿ ಬದುಕ ಸುಡದಿರುವುದೇ?

"ಅಮ್ಮಾ ಅಮ್ಮಾ... ಅಲ್ನೋಡು, ಆ ಬೆಟ್ಟದ ತುದೀಲಿ ಯಾರೋ ಸೌದೆ ಉರಿಸಿ ಅಡುಗೆ ಮಾಡ್ತಾ ಇದಾರೆ, ಎಷ್ಟೊಂದು ಹೊಗೆ ಬರ್ತಾ ಇದೆ" ಎಂದು ಚಿಕ್ಕವನಿದ್ದಾಗ ಬೇಸಿಗೆ ರಜೆಗೆ ಅಜ್ಜಿಯ ಊರಿಗೆ ಹೋಗುವಾಗ ಬಸ್ಸಿನ ಕಿಟಕಿ ಪಕ್ಕದ ಸೀಟಿನಲ್ಲಿ ಕುಳಿತು ನಾನು ಕೇಳಿದ ಈ ಪ್ರಶ್ನೆಗೆ ನನ್ನಮ್ಮನಿಂದ ಬಂದದ್ದೂ ಅಷ್ಟೇ ಮುಗ್ಧ ಉತ್ತರ. "ಅಯ್ಯೋ... ಅದು ಅಡುಗೆ ಮಾಡ್ತಾ ಇರೋದಲ್ಲಪ್ಪ, ಅದು ಕಾಡ್ಗಿಚ್ಚು. ಬೇಸಿಗೆಯಲ್ಲಿ ಒಣಗಿದ ಮರ ಮತ್ತೊಂದು ಮರಕ್ಕೆ ಉಜ್ಜಿದಾಗ ಬೆಂಕಿಯ ಕಿಡಿ ಹುಟ್ಟಿ ಕಾಡನ್ನೆಲ್ಲಾ ಸುಟ್ಟು ಬಿಡುತ್ತದೆ" ಎಂದು ಅಮ್ಮ ಹೇಳಿದ ತಲೆಮಾರುಗಳ ಜ್ಞಾನವನ್ನು ತಲೆಗೆ ತುಂಬಿಕೊಂಡಿದ್ದೆ. ಎಂಟನೇ ತರಗತಿ ಓದುವಾಗ ಬಯಾಲಜಿಯನ್ನು ಭಯಾಲಜಿಯನ್ನಾಗಿಸಿ ಪಾಠ ಮಾಡುತ್ತಿದ್ದ ನಮ್ಮ ಮೇಷ್ಟ್ರು ಕೇಳಿದ 'ಕಾಡ್ಗಿಚ್ಚು ಹೇಗೆ ಉಂಟಾಗುತ್ತದೆ?' ಎಂಬ ಪ್ರಶ್ನೆಗೆ ಇದೇ ಉತ್ತರ ಕೊಟ್ಟು 'ಶಹಬ್ಬಾಸ್' ಎಂದು ಬೆನ್ನು ತಟ್ಟಿಸಿಕೊಂಡಿದ್ದನ್ನು ನೆನಪಿಸಿಕೊಂಡು ನಕ್ಕಿದ್ದೇನೆ.

ಈಗಲೂ ಕಾಡ್ಗಿಚ್ಚು ಮರಗಳ ಘರ್ಷಣೆಯಿಂದಲೇ ಹತ್ತುತ್ತದೆ ಎಂದು ಅನೇಕರು ನಂಬಿರುವುದನ್ನು, ಮಾತನಾಡುವುದನ್ನು ಕೇಳಿದ್ದೇನೆ. ಅಂತಹ ಒಂದು ಕಿಡಿಯಿಂದ ಕಾಡಿಗೆ ಬೆಂಕಿ ಹೊತ್ತಬೇಕೆಂದರೆ ಇಡೀ ಕಾಡಿಗೆ ಯಾರಾದರೂ ಪೆಟ್ರೋಲ್ ಸುರಿದರೆ ಮಾತ್ರ ಸಾಧ್ಯ. ವೈಜ್ಞಾನಿಕ ಹಿನ್ನೆಲೆಯಿಲ್ಲದ ಈ 'ಕಿಡಿ'ಕಾರನ ಬಗ್ಗೆ ಯಾವುದೇ ಪುರಾವೆಯಿಲ್ಲ. ಆದರೆ ಬಹುತೇಕ ಕಾಡ್ಗಿಚ್ಚುಗಳಿಗೆ ಕಾರಣ ಮಾತ್ರ ಮನುಷ್ಯನ 'ಕಿಡಿ'ಗೇಡಿತನ ಎಂಬುದನ್ನು ವಿಶೇಷವಾಗಿ ಹೇಳಬೇಕಿಲ್ಲ.

ಅಕ್ಟೋಬರ್ 7, 1825 ರಂದು ಕೆನಡಾದ ಮಿರಾಮಿಚಿ ನದಿ ತೀರದ ಕಾಡಿಗೆ ಹತ್ತಿದ್ದ ಬೆಂಕಿ 16000 ಚದರ ಕಿಮೀ ನಷ್ಟು ಕಾಡನ್ನು ಆಹುತಿ ತೆಗೆದುಕೊಂಡಿತ್ತು. ನ್ಯೂ ಬ್ರನ್ಸ್ ವಿಕ್ ನ ಉತ್ತರ ಭಾಗ ಸ್ಮಶಾನವಾಗಿತ್ತು. ಬೆಂಕಿಯ ಕೆನ್ನಾಲಿಗೆಯಿಂದ ತಪ್ಪಿಸಿಕೊಳ್ಳಲು ಮಿರಾಮಿಚಿ ನದಿಗೆ ಹಾರಿದ ಜೀವಜಂತುಗಳಿಗೆ ಲೆಕ್ಕವೇ ಇಲ್ಲ. 1910 ರ ಆಗಸ್ಟ್ 20 ರಂದು ಅಮೇರಿಕಾ

ಸಂಯುಕ್ತ ಸಂಸ್ಥಾನದ ಮೊಂಟಾನ ಹಾಗೂ ವಾಷಿಂಗ್ಟನ್ ಬಳಿ ಕಾಣಿಸಿಕೊಂಡ ಕಾಡ್ಗಿಚ್ಚು ಮೂವತ್ತು ಲಕ್ಷ ಎಕರೆ ಅರಣ್ಯವನ್ನು ಸುಟ್ಟು ಹಾಕಿದ್ದಲ್ಲದೆ ಬೆಂಕಿ ಆರಿಸುವಲ್ಲಿ ನಿರತರಾಗಿದ್ದ 87 ಅರಣ್ಯ ರಕ್ಷಕರನ್ನೂ ಭಸ್ಮ ಮಾಡಿತ್ತು. 2007 ರಲ್ಲಿ ಗ್ರೀಸ್ ನಲ್ಲಿ ಉಂಟಾದ ಕಾಡ್ಗಿಚ್ಚು ಆರೂವರೆ ಲಕ್ಷ ಎಕರೆ ಪ್ರದೇಶದ ಕಾಡನ್ನು ಸುಟ್ಟು ಕರಕಲಾಗಿಸಿತ್ತು. ಕಾಡನ್ನು ಸುಟ್ಟು ತಿನ್ನುವ ಇಂತಹ ಅದೆಷ್ಟೋ ಬೆಂಕಿ ಅನಾಹುತಗಳು ಭಾರತದಲ್ಲೂ ನಡೆದಿವೆ. 2016 ರಲ್ಲಿ ಉತ್ತರಾಖಂಡದಲ್ಲಿ ಉಂಟಾದ ಕಾಡ್ಗಿಚ್ಚು ದುರಂತ ಎಂಟೂವರೆ ಸಾವಿರ ಎಕರೆಯಲ್ಲಿ ಬೆಳೆದು ನಿಂತಿದ್ದ ಪೈನ್ ಮರಗಳನ್ನು ಸುಟ್ಟು ಹಾಕಿತ್ತು. ದಟ್ಟ ಹೊಗೆಯಿಂದಾಗಿ ಬೆಂಕಿ ನಂದಿಸುವ ಕಾರ್ಯಾಚರಣೆಯನ್ನು ನ್ಯಾಷನಲ್ ಡಿಸಾಸ್ಟರ್ ರೆಸ್ಪಾನ್ಸ್ ಫೋರ್ಸ್ (ಎನ್. ಡಿ. ಆರ್. ಎಫ್) ತಂಡ ಸಹ ಕೈಚೆಲ್ಲಿ ಕುಳಿತಿತ್ತು. ನಿಸರ್ಗದ ಲೀಲೆಯೆಂಬಂತೆ ಮರು ದಿನ ಬಂದ ಜೋರು ಮಳೆ ಆಗಬಹುದಿದ್ದ ದೊಡ್ಡ ಅನಾಹುತವನ್ನು ತಪ್ಪಿಸಿತ್ತು. 2019 ರಲ್ಲಿ ನಮ್ಮದೇ ರಾಜ್ಯದ ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲಿ ಉಂಟಾದ ಕಾಡ್ಗಿಚ್ಚನ್ನು ಯಾರು ತಾನೇ ಮರೆಯಲು ಸಾಧ್ಯ? ಹತ್ತು ಸಾವಿರ ಎಕರೆಗೆ ಹತ್ತಿದ್ದ ಬೆಂಕಿಯನ್ನು ತಹಬದಿಗೆ ತರಲು ಅರಣ್ಯ ಸಿಬ್ಬಂದಿ ಐದಾರು ದಿನಗಳ ಕಾಲ ಪ್ರಾಣದ ಹಂಗು ತೊರೆದು ಹೋರಾಡಬೇಕಾಯಿತು. ಈ ಯಾವುದೇ ಕಾಡ್ಗಿಚ್ಚುಗಳು ಮರಕ್ಕೆ ಮರ ಉಜ್ಜಿ ಅಂಟಿಕೊಂಡವಲ್ಲ. ಇವೆಲ್ಲವಕ್ಕೂ ಮನುಷ್ಯನ ದುರಾಸೆ, ಕೊಳ್ಳೆಬಾಕತನ, ಬೇಜವಾಬ್ದಾರಿತನ, ಕಿಡಿಗೇಡಿತನಗಳೇ ಕಾರಣ. ಫಾರೆಸ್ಟ್ ಸರ್ವೆ ಆಫ್ ಇಂಡಿಯಾ (Forest Survey of India) ನಡೆಸಿದ ಅಧ್ಯಯನದ ಪ್ರಕಾರ ಭಾರತದ ಒಟ್ಟು ಅರಣ್ಯದ ಶೇಕಡ 55 ರಷ್ಟು ಭಾಗದಲ್ಲಿ ಈ ಕಾಡಿನ ಬೆಂಕಿ ಸರ್ವೇ ಸಾಮಾನ್ಯ. ಬೆಂಕಿಗೆ ಆಹುತಿಯಾದ ಒಟ್ಟು ಅರಣ್ಯದಲ್ಲಿ ಶೇಕಡ 75 ರಷ್ಟು ಭಾಗದಲ್ಲಿ ಕಾಡು ಮತ್ತೆ ಜೀವ ಪಡೆವ ಪ್ರಮಾಣ ನಿರೀಕ್ಷೆಗೂ ಕಡಿಮೆ ಇರುವುದಾಗಿ ವಿಜ್ಞಾನಿಗಳು ವರದಿ ಮಾಡಿದ್ದಾರೆ.

© ಪ್ರಕಾಶ ಗಾಣಿಗೇರ

ಕಾಡ್ಗಿಚ್ಚುಗಳು ಸಹಜವಾಗಿ ಎಲೆ ಉದುರುವ ಕಾಡುಗಳು, ಕುರುಚಲು ಕಾಡುಗಳು, ಹುಲ್ಲುಗಾವಲಿನ ಕಾಡುಗಳಲ್ಲಿ ಕಂಡುಬರುತ್ತವೆ. ನಿತ್ಯ ಹರಿದ್ವರ್ಣದ ಮಳೆ ಕಾಡುಗಳಲ್ಲಿ ಕಾಡ್ಗಿಚ್ಚಿನ ಸಮಸ್ಯೆ ತಲೆದೋರುವುದಿಲ್ಲ. ಆದರೆ ಶೋಲ ಅರಣ್ಯ ಪ್ರದೇಶಗಳ ಹುಲ್ಲುಗಾವಲುಗಳಲ್ಲಿ ಕಾಡ್ಗಿಚ್ಚು ಹತ್ತುವುದು ಸುಲಭ. ಅಸ್ಸಾಂ, ಮಿಜೋರಾಂ, ಒಡಿಶಾ ಹಾಗೂ ತ್ರಿಪುರಾ ರಾಜ್ಯಗಳಲ್ಲಿ ಕಾಡ್ಗಿಚ್ಚಿನ ದುರಂತಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸಂಭವಿಸುತ್ತವೆ. ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕಾಡ್ಗಿಚ್ಚಿನ ಅನಾಹುತಗಳು ಕರ್ನಾಟಕದಲ್ಲಿ ಕಡಿಮೆಯೇ ಇದ್ದರೂ ಸಂಭವಿಸಿದಾಗ ಹತೋಟಿಗೆ ಬರಲು ಹೆಚ್ಚಿನ ಸಮಯ ತೆಗೆದುಕೊಂಡ ಉದಾಹರಣೆಗಳು ಬಹಳಷ್ಟಿವೆ.

ನನ್ನೂರಾದ ಶಿವಮೊಗ್ಗದ ಸುತ್ತಮುತ್ತ ಹಬ್ಬಿರುವ ಶೆಟ್ಟಿಹಳ್ಳಿ ಅಭಯಾರಣ್ಯದಲ್ಲಿ ಇತ್ತೀಚೆಗೆ ಸುಮಾರು ಐವತ್ತಕ್ಕೂ ಹೆಚ್ಚು ಜಾಗದಲ್ಲಿ ಕಾಡ್ಗಿಚ್ಚು ಕಂಡುಬಂದಿದೆ. ಅದನ್ನೆಲ್ಲಾ ಹತೋಟಿಗೆ ತರಲು ಅರಣ್ಯ ಸಿಬ್ಬಂದಿ ಪಟ್ಟ ಪಾಡು ಅಷ್ಟಿಷ್ಟಲ್ಲ. ಇಲ್ಲಿ ಕಂಡುಬರುತ್ತಿರುವ ಹೊಸ ಹೊಸ ರಬ್ಬರ್ ಪ್ಲಾಂಟೇಶನ್ ಗಳಿಗೂ ಈ ಬೆಂಕಿಗಳಿಗೂ ಸಂಬಂಧವಿರಬಹುದೇ? ಮಲೆನಾಡಿನ ಭಾಗದಲ್ಲಿ ನವೆಂಬರ್ ನಿಂದ ಮಾರ್ಚ್ ವರೆಗೂ ಅನೇಕ ವಲಸೆ ಹಕ್ಕಿಗಳು ಆಗಮಿಸಿರುತ್ತವೆ. ಜೊತೆಗೆ ಸ್ಥಳೀಯ ಪಕ್ಷಿ ಪ್ರಭೇದಗಳು, ಪ್ರಾಣಿಸಂಕುಲವೂ ಈ ಭಾಗದಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಕಾಡ್ಗಿಚ್ಚಿನಿಂದಾಗಿ ಅಪಾಯಕ್ಕೆ ಸಿಲುಕುತ್ತಿವೆ.

ಕಾಡ್ಗಿಚ್ಚಿನಿಂದಾಗುವ ಅಪಾಯಗಳು

ಕಾಡು ಕೇವಲ ಮರ ಗಿಡಗಳ ಸಮೂಹವಲ್ಲ. ಅಷ್ಟೇ ಆಗಿದ್ದರೆ ಅರಣ್ಯಗಳನ್ನು ಬೆಳೆಸುವುದು ಮಾನವನಿಗೆ ಸವಾಲಿನ ಕೆಲಸವಾಗುತ್ತಿರಲಿಲ್ಲ. ಅದೊಂದು ನಿಸರ್ಗ ನಿರ್ಮಿಸಿದ ಸಂಕೀರ್ಣ ವ್ಯವಸ್ಥೆ. ಸೂಕ್ಷ್ಮಾತಿಸೂಕ್ಷ್ಮ ಜೀವ ಪ್ರಕ್ರಿಯೆಗಳು ಒಂದಕ್ಕೊಂದು ಹೆಣೆದುಕೊಂಡು ನೂರಾರು ವರ್ಷಗಳ ಸುದೀರ್ಘ ಅವಧಿಯಲ್ಲಿ ಮಾತ್ರವೇ ಸೃಷ್ಟಿಯಾಗುವ ಸೊಬಗು ಅರಣ್ಯ. ಮನುಷ್ಯ ಸೃಷ್ಟಿಸಲಾಗದ ನೈಸರ್ಗಿಕ ಸಂಪತ್ತು.

ಬೆಲೆಯೇ ಕಟ್ಟಲಾಗದ ಅಪಾರ ಅರಣ್ಯ ಸಂಪತ್ತು ಕಾಡ್ಗಿಚ್ಚಿನಿಂದಾಗಿ ನಾಶ ಹೊಂದುತ್ತದೆ. ಕಾಡ್ಗಿಚ್ಚಿನ ಪ್ರಮಾಣವನ್ನು ಸುಟ್ಟು ಹೋದ ಮರಗಳ ಸಂಖ್ಯೆಯಲ್ಲಿ ಮಾತ್ರ ಲೆಕ್ಕಾಚಾರ ಹಾಕಿಬಿಡುವ ಟಿಂಬರ್ ವ್ಯಾಪಾರಿಯಂತಹ ಮನಸ್ಥಿತಿ ಅಪಾಯಕರ. ಸರ್ಕಾರಗಳಿಗೆ ಬೇಕಿರುವುದು ಈ ಆರ್ಥಿಕ ಲೆಕ್ಕಾಚಾರ ಮಾತ್ರ. ಆದರೆ ಬೆಂಕಿಗೆ ಆಹುತಿಯಾಗುವ ಮರಗಿಡಗಳನ್ನೇ ಆಶ್ರಯಿಸಿ ಗೂಡು ಕಟ್ಟಿ ಸಂತಾನ ಬೆಳೆಸುವ ಪಕ್ಷಿಗಳು, ಅನೇಕ ಸಸ್ತನಿಗಳು, ಉರಗಗಳು, ಲೆಕ್ಕಕ್ಕೇ ಸಿಗದಷ್ಟು ಕ್ರಿಮಿ ಕೀಟಗಳು, ಇವುಗಳ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವೆ? ಹುಲ್ಲು ಅಥವಾ ಕುರುಚಲು ಹೆಚ್ಚಿರುವ ಕಾಡಿಗೆ ಬೆಂಕಿ ತಗುಲಿದರಂತೂ ಧಗಧಗಿಸಿ ಬಿಡುತ್ತದೆ. ಹುಲ್ಲಿನ ನಡುವೆ ಇರುವ ಹಕ್ಕಿಗಳ, ಹಾವುಗಳ ಇತರೆ ಸರೀಸೃಪಗಳ

ಮೊಟ್ಟೆಗಳು, ಮರಿಗಳು ಉರಿಬೆಂಕಿಯಲ್ಲಿ ಬೆಂದು ಹೋಗುತ್ತವೆ. ಬೆಂಕಿಯ ಕೆನ್ನಾಲಿಗೆಯಿಂದ ತಪ್ಪಿಸಿಕೊಂಡು ಹಾರಿ ಹೋಗಬಲ್ಲ, ಓಡಿ ಹೋಗಬಲ್ಲ ಒಂದಷ್ಟು ಜೀವಚರಗಳು ಪ್ರಾಣ ಉಳಿಸಿಕೊಳ್ಳಬಹುದೇನೋ. ಆದರೆ ಉಳಿದವುಗಳ ಪರಿಸ್ಥಿತಿ ಊಹೆಗೂ ನಿಲುಕದ್ದು. ಆ ಮೂಕಪ್ರಾಣಿಗಳ ನರಳಾಟ ಕೇವಲ ಅರಣ್ಯರೋಧನವಾಗಿಬಿಡುತ್ತದೆ. ಸಣ್ಣ ಜೀವಿಗಳೇ ಆದರೂ ನಿಸರ್ಗ ವ್ಯವಸ್ಥೆಯ ಕೊಂಡಿಗಳಾಗಿರುವ ಕಪ್ಪೆ, ಜೇಡ, ಇರುವೆ, ಗೆದ್ದಲು, ಪತಂಗ, ಜೇನ್ನೊಣ, ಪಾಚಿ, ಶಿಲೀಂಧ್ರ, ಮುಂತಾದ ಜೀವಿಗಳು ಸುಟ್ಟು ಹೋದ ಕಾಡಿನಲ್ಲಿ ಮತ್ತೆ ಬರುವವರೆಗೂ ಕಾಡಿಗೆ ಮರುಹುಟ್ಟು ಸಿಗುವುದಿಲ್ಲ. ಬೆಂಕಿಯ ಕಾವಿಗೆ ನಾಶವಾಗುವ ಮಣ್ಣೊಳಗಿನ ಸೂಕ್ಷ್ಮ ಪ್ರಪಂಚ ಮರುಸೃಷ್ಟಿಯಾದರೆ ಮಾತ್ರ ಹಸಿರಸಿರಿ ಮತ್ತೆ ಬೆಳೆಯಲು ಅಡಿಪಾಯ ಸಿಗುತ್ತದೆ.

ಒಂದೆಡೆ ಕಾಡ್ಗಿಚ್ಚಿನಿಂದಾಗಿ ಜೀವವೈವಿಧ್ಯತೆ ನಾಶ ಹೊಂದಿದರೆ, ಮತ್ತೊಂದೆಡೆ ಪರಿಸರದ ಮೇಲೂ ಹಾಗೂ ಮಾನವನ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಕಾಡು ಉರಿದು ಉಂಟಾಗುವ ಹೊಗೆಯಿಂದ ಗಾಳಿ ಮಲಿನವಾಗುತ್ತದೆ, ಕೆಲವೊಮ್ಮೆ ಆ ಹೊಗೆ ಬಹುದೂರದವರೆಗೂ ವ್ಯಾಪಿಸಿ ಜನರ ಉಸಿರುಗಟ್ಟಿಸಿದ ಉದಾಹರಣೆಗಳು ಬಹಳಷ್ಟಿವೆ. ಆರೋಗ್ಯದ ಮೇಲೆ ಧೀರ್ಘ ಕಾಲದ ಪರಿಣಾಮಗಳು ಉಂಟಾಗಿ ಉಸಿರಾಟ ಸಮಸ್ಯೆ, ಕೆಮ್ಮು, ಅಸ್ತಮಾ, ಮುಂತಾದ ಸಮಸ್ಯೆಗಳೂ ಉಲ್ಬಣವಾಗುತ್ತವೆ. ಕಾಡ್ಗಿಚ್ಚು ಜಲಮಾಲಿನ್ಯಕ್ಕೂ ಕಾರಣವಾಗುತ್ತದೆ ಎಂಬುದು ಮತ್ತೊಂದು ಗಮನಿಸಲೇಬೇಕಾದ ಪರಿಣಾಮ. ಬೆಂಕಿ ಆರಿದ ನಂತರ ಕಾಡಿನ ನೆಲ ನೀರನ್ನು ಇಂಗಿಸಿಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡಿರುತ್ತದೆ. ಹಾಗಾಗಿ ಮೊದಲ ಮಳೆಯ ನೀರು ಕಾಡ ನೆಲದಲ್ಲಿ ಇಂಗುವ ಬದಲಾಗಿ ಕಸವನ್ನು, ಬೆಂಕಿಯಿಂದುಂಟಾದ ಬೂದಿಯಲ್ಲಿನ ಅಪಾಯಕಾರಿ ಲೋಹಗಳನ್ನು ಹೊತ್ತು ಸಾಗಿ ಕೆರೆ, ನದಿಗಳಿಗೆ ಸೇರಿಸಿ ಬಿಡುತ್ತದೆ.

© ಧನರಾಜ್ ಎಂ.

ಕಾಡ್ಗಿಚ್ಚಿನ ಮತ್ತೊಂದು ಮುಖ

ಕಾಡ್ಗಿಚ್ಚಿನಿಂದಾಗಿ ದುಷ್ಪರಿಣಾಮಗಳು ಉಂಟಾಗುವುದು ಒಂದೆಡೆಯಾದರೆ, ಪ್ರಾಕೃತಿಕವಾಗಿ ಒಂದಷ್ಟು ಅನುಕೂಲಗಳು ಇರುವುದೂ ಸಹ ವೈಜ್ಞಾನಿಕವಾಗಿ ಧೃಡಪಟ್ಟಿದೆ. ಕಾಡಿನ ಸಸ್ಯ ವೈವಿಧ್ಯತೆಯನ್ನು ಒಮ್ಮೊಮ್ಮೆ ಈ ಬೆಂಕಿಯೇ ನಿರ್ಧರಿಸುತ್ತದೆ. ಕಾಡಿನ ಕೆಲವು ಗಿಡಮರಗಳು ಉದುರಿಸುವ ಬೀಜಗಳು ಮೊಳಕೆಯೊಡೆಯಬೇಕೆಂದರೆ ಬೆಂಕಿಯ ಶಾಖ ತಾಗಲೇಬೇಕು. (ಉದಾಹರಣೆಗೆ ಲಾಡ್ಜೋಪೋಲ್ ಪೈನ್, ಯೂಕಲಿಪ್ಟಸ್ ಮತ್ತು ಬ್ಯಾಂಕ್ಸಿಯಾ) ಇಂತಹ ಗಿಡಗಳ ಜೀವನಚಕ್ರ ಹೇಗೆ ರೂಪಿತವಾಗಿರುತ್ತದೆಯೆಂದರೆ ಕಾಡು ಒಣಗುವ ಸಮಯಕ್ಕೆ ಮುಂಚಿತವಾಗಿ ಬೀಜಗಳನ್ನು ಪಸರಿಸಿರುತ್ತವೆ. ಕಾಡ್ಗಿಚ್ಚು ಈ ಸಮಯಕ್ಕೆ ಉಂಟಾದರೆ ಮಾತ್ರ ಇವು ಕಾವು ತಾಗಿ ಚುರುಕಾಗಿ ಮೊಳಕೆಯೊಡೆಯಬಲ್ಲವು. ಈ

ಸಮಯಕ್ಕಿಂತ ಮುಂಚೆ ಬೆಂಕಿ ಉಂಟಾದರೆ ಕಾವು ಪಡೆಯಬೇಕಾದ ಬೀಜಗಳೇ ಇನ್ನೂ ನೆಲ ತಲುಪಿರುವುದಿಲ್ಲ. ತುಂಬಾ ತಡವಾಗಿ ಉಂಟಾದರೆ ಬೀಜಗಳು ತಮ್ಮ ಜೀವಿತಾವಧಿಯನ್ನು ಮುಗಿಸಿಬಿಟ್ಟಿರುತ್ತವೆ.

ಪೈರೋಫೈಟ್ಸ್ (Pyrophytes) ಎಂದು ಕರೆಯಲ್ಪಡುವ ಒಂದು ಸಸ್ಯ ವರ್ಗ ಪದೇಪದೇ ಉಂಟಾಗುವ ಕಾಡ್ಗಿಚ್ಚನ್ನು ತಡೆದುಕೊಳ್ಳಬಲ್ಲವು. ಮುಂದೆ ಅಲ್ಲಿ ಹುಟ್ಟುವ ಹೊಸ ಅರಣ್ಯದ ಸಸ್ಯವೈವಿಧ್ಯತೆಯನ್ನು, ಅದನ್ನು ಆಶ್ರಯಿಸಿ ಬರುವ ಪ್ರಾಣಿ ಸಂಕುಲವನ್ನು ನಿರ್ಧರಿಸುವುದು ಇಂತಹುದೇ ಸಸ್ಯಗಳು. ಕಾಡ್ಗಿಚ್ಚಿನ ನಂತರ ವಿಭಿನ್ನ ಸ್ವರೂಪ ಹಾಗೂ ವೈವಿಧ್ಯತೆಯಿಂದ ಕೂಡಿ ಬೆಳೆದ ಅರಣ್ಯಗಳ ಉದಾಹರಣೆಗಳು ಕಾಡನ್ನು ಸುಡುವ ಬೆಂಕಿಯ ಮತ್ತೊಂದು ಮುಖವನ್ನು ತೋರಿಸುತ್ತದೆ.

© ಧನರಾಜ್ ಎಂ.

ಕಾಡ್ಗಿಚ್ಚಿಗೆ ಕಾರಣಗಳು

ಶೇಕಡ 84 ರಷ್ಟು ಕಾಡ್ಗಿಚ್ಚುಗಳು ಮನುಷ್ಯನಿಂದಲೇ ಹುಟ್ಟುವಂತವು. ಇದರಲ್ಲಿ ಮನುಷ್ಯನ ದುರಾಸೆ, ಅಜಾಗರೂಕತೆ, ಅಜ್ಞಾನ, ಮೂಢನಂಬಿಕೆ, ದುಷ್ಟತನ ಎಲ್ಲವೂ ಸೇರಿವೆ. ಕಾಡಿನ ಜಡ್ಡು ಕಾಡುಗಳ್ಳರಿಗೆ ಅರಣ್ಯದ ಒಳಹೊಕ್ಕಲು ಅಡ್ಡಿಯಾಗುತ್ತದೆ. ಆ ಜಡ್ಡಿನಲ್ಲಿ ಬೆಳೆವ ಲಂಟಾನದಂತಹ ಮುಳ್ಳಿನ ಗಿಡಗಳು ಸುಟ್ಟು ಹೋದರೆ ಮಾತ್ರ ಇವರಿಗೆ ದಾರಿ ಸರಾಗವಾಗುತ್ತದೆ. ಅರಣ್ಯ ಇಲಾಖೆಯ ಸಿಬ್ಬಂದಿ ಹೇಳುವ ಪ್ರಕಾರ ಈ ರೀತಿ ಜಡ್ಡಿಗೆ ಬೆಂಕಿ ಬಿದ್ದ ಕೆಲವು ದಿನಗಳ ಅಂತರದಲ್ಲಿ ಮರಗಳ್ಳತನ ಆಗುವ ಸಾಧ್ಯತೆಗಳು ಹೆಚ್ಚು. ಆದರೆ ಈ ಕಾರಣಕ್ಕಾಗಿ ಕಾಡಿಗೆ ಬೆಂಕಿ ಹಚ್ಚುವುದನ್ನು ತಡೆಯಲು ಅರಣ್ಯ ಇಲಾಖೆ ಸಾಕಷ್ಟು ಮುಂಜಾಗ್ರತೆ ವಹಿಸುತ್ತಿದೆ. ಆದರೆ ಬೆಂಕಿ ಹಚ್ಚುವ ಕೈ ಯಾವುದೆಂದು ತಿಳಿದಿದ್ದರೂ ಸಹ ಅರಣ್ಯ ಸಿಬ್ಬಂದಿ ಕೈಕಟ್ಟಿ ಕೂರಬೇಕಾದ ಕೆಲವು ಪರಿಸ್ಥಿತಿಯೂ ದೇಶದ ಹಲವೆಡೆ ಇದೆ. ಭಾರತದ ಈಶಾನ್ಯ ರಾಜ್ಯಗಳಲ್ಲಿ ಕೃಷಿ ಭೂಮಿ ವಿಸ್ತರಣೆಗಾಗಿ ಕಾಡು ಸುಡುವ ಪದ್ಧತಿ ಇದೆ.

ಇದನ್ನು ತಡೆಯುವ ಅಥವಾ ವಿರೋಧಿಸುವ ಇಚ್ಛಾಶಕ್ತಿ ಇರುವ ಯಾವುದೇ ಪಕ್ಷ ಅಲ್ಲಿ ಇನ್ನೂ ಅಧಿಕಾರಕ್ಕೇ ಬಂದಿಲ್ಲ.

ಗ್ರಾಮೀಣ ಭಾಗದಲ್ಲಿ ಈಗಲೂ ಸಹ ದನ ಕರುಗಳಿಗೆ, ಕುರಿ-ಮೇಕೆಗಳಿಗೆ ಮೇವಿನ ಮೂಲವೇ ಅರಣ್ಯ. ಒಣಗಿ ನಿಂತ ಹುಲ್ಲಿಗೆ ಬೆಂಕಿ ಹಚ್ಚಿದರೆ ಮಳೆಯ ನಂತರ ಹುಟ್ಟುವ ಹೊಸ ಹುಲ್ಲು ತುಂಬಾ ಚೆನ್ನಾಗಿ ಬೆಳೆಯುತ್ತದೆಯೆಂಬ ನಂಬಿಕೆ ಜನರಲ್ಲಿದೆ. ಇದು ಭಾಗಶಃ ನಿಜವೂ ಹೌದು ಎನ್ನುತ್ತಾರೆ ಕೆಲವು ಅರಣ್ಯ ಅಧಿಕಾರಿಗಳು. ಇದೇ ಕಾರಣಕ್ಕಾಗಿ ಕುರಿಗಾಹಿಗಳು ಕಾಡಿನ ಹುಲ್ಲಿಗೆ ಬೆಂಕಿ ತಾಗಿಸುತ್ತಾರೆ. ಆದರೆ ಈ ಸಂದರ್ಭದಲ್ಲಿ ಅವರ ಅಜಾಗರೂಕತೆಯಿಂದ ಬೆಂಕಿ ಇತರೆ ಗಿಡಮರಗಳಿಗೆ ತಾಗಿ ತೀವ್ರತೆ ಪಡೆಯುವ ಸಂಭವವೇ ಹೆಚ್ಚು.

ಕೆಲವೊಮ್ಮೆ ಪ್ರವಾಸಿಗರಿಂದಲೂ ಕಾಡ್ಗಿಚ್ಚು ಉಂಟಾಗುತ್ತವೆ. ಮೋಜು ಮಸ್ತಿಯ ನೆಪದಲ್ಲಿ ಅರಣ್ಯ ಸಿಬ್ಬಂದಿಯ ಕಣ್ತಪ್ಪಿಸಿ ಕಾಡಿನ ಒಳಗೆ ಕ್ಯಾಂಪ್ ಫೈರ್ (Camp fire) ಹಚ್ಚಿ ನಂತರ ಬೆಂಕಿ ನಂದಿಸದೇ ಇರುವುದು, ಸಿಗರೇಟು ಸೇದಿ ಹಾಗೆಯೇ ಬಿಸಾಡಿಬಿಡುವುದು, ಮುಂತಾದ ಕಾರಣಗಳಿಂದ ಕಾಡಿಗೆ ಬೆಂಕಿ ಹತ್ತಿದ ಹಲವಾರು ಪ್ರಸಂಗಗಳಿವೆ. ಇದನ್ನು ಪ್ರಶ್ನಿಸುವ ಅರಣ್ಯ ಸಿಬ್ಬಂದಿಯೊಂದಿಗೆ ಘರ್ಷಣೆಗಿಳಿದು ಉದ್ಧಟತನ ತೋರುವ 'ಕಿಡಿ'ಗೇಡಿಗಳೂ ಸಹ ಅರಣ್ಯಕ್ಕೆ ಮಾರಕ.

ಮತ್ತೊಂದು ಪ್ರಮುಖ ಕಾರಣ ಸ್ಥಳೀಯರಿಗೂ ಅರಣ್ಯ ಇಲಾಖೆ ಸಿಬ್ಬಂದಿಗಳಿಗೂ ನಡುವೆ ಇರುವ ಒಂದು ತೆರೆಮರೆಯ ಸಂಘರ್ಷ. ತೋಟ ವಿಸ್ತರಣೆಗಾಗಿಯೋ, ಕಳ್ಳನಾಟ ಸಾಗಿಸಲೆಂದೋ ಯಾರಾದರೂ ಮರ ಕಡಿದಾಗ ಅರಣ್ಯ ಸಿಬ್ಬಂದಿ ಅವರ ಹೆಡೆಮುರಿ ಕಟ್ಟಿರುತ್ತಾರೆ. ಇದರಿಂದ ಅರಣ್ಯ ಸಿಬ್ಬಂದಿ ಸ್ಥಳೀಯರ ದ್ವೇಷ ಕಟ್ಟಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲದೆ ಅರಣ್ಯ ಸಂರಕ್ಷಣಾ ಕಾಯ್ದೆಯ ಕಠಿಣ ನಿಯಮಗಳು ಅನುಷ್ಠಾನಗೊಂಡ ನಂತರ ಸ್ಥಳೀಯರು ಅರಣ್ಯಗಳಿಂದ ಪಡೆಯುತ್ತಿದ್ದ ಸಣ್ಣ ಪುಟ್ಟ ಉತ್ಪನ್ನಗಳಿಗೂ ಅಡ್ಡಿಯಾಗಿದೆ. ಶೇಕಡ ತೊಂಬತ್ತರಷ್ಟು ಗ್ರಾಮೀಣ ಜನ ಅರಣ್ಯ ಇಲಾಖೆಯ ಜೊತೆಗೆ ಕೈಜೋಡಿಸಿ ಅರಣ್ಯ ಸಂರಕ್ಷಣೆಗೆ ಸಹಕರಿಸಿದರೆ, ಕೆಲವರು ತಮ್ಮ ದ್ವೇಷ ತೀರಿಸಿಕೊಳ್ಳಲು ಕಾಡಿಗೆ ಬೆಂಕಿ ಹಚ್ಚುವ ವಿಕೃತ ಕೃತ್ಯಕ್ಕೆ ಕೈ ಹಾಕುತ್ತಾರೆ.

ಹೀಗೂ ಉಂಟು

ಕಾಡ್ಗಿಚ್ಚುಗಳು ನೈಸರ್ಗಿಕವಾಗಿ ಸಿಡಿಲಿನಿಂದ ಅಥವಾ ಕೃತಕವಾಗಿ ಮನುಷ್ಯರಿಂದ ಉಂಟಾಗುವುದು ಸಹಜ. ಆದರೆ ಕೆಲವು ಹಕ್ಕಿಗಳು ಕಾಡಿಗೆ ಬೆಂಕಿ ಹಚ್ಚುತ್ತವೆಯೆಂದರೆ ಅಚ್ಚರಿಯಲ್ಲವೇ? ಆಸ್ಟ್ರೇಲಿಯಾದಲ್ಲಿ ನಡೆದ ಸಂಶೋಧನೆಯಲ್ಲಿ ಈ ಅಂಶ ಬಯಲಿಗೆ ಬಂದಿದೆ. Fire hawk raptors ಎಂದು ಕರೆಲ್ಪಡುವ Black kite, Whistling kite ಹಾಗೂ Brown Falcon ಹಕ್ಕಿಗಳು ಕಾಡ್ಗಿಚ್ಚನ್ನು ಹರಡುತ್ತವೆಯಂತೆ. ಸ್ಥಳೀಯ ಬುಡಕಟ್ಟು ಜನರಿಗಿರುವ ಮಾಹಿತಿಯಂತೆ ಹಕ್ಕಿಗಳ ಈ ಸ್ವಭಾವಕ್ಕೆ ಸುಮಾರು ನಲವತ್ತು ಸಾವಿರ ವರ್ಷಗಳ ಇತಿಹಾಸವಿದೆ. ಕಾಡಿನ ಯಾವುದೋ ಒಂದು ಭಾಗದಲ್ಲಿ ಒಂದು ಸಣ್ಣ ಬೆಂಕಿ ಕಂಡ ಕೂಡಲೆ ನೂರಾರು ಸಂಖ್ಯೆಯಲ್ಲಿ ಈ ಹಕ್ಕಿಗಳು ಅಲ್ಲಿಗೆ ದಾಂಗುಡಿಯಿಡುತ್ತವೆ. ಬೆಂಕಿ ತಾಗಿದ ಸಣ್ಣ ಕಡ್ಡಿಗಳನ್ನು ಸುಮಾರು ಒಂದು ಕಿಲೋಮೀಟರ್ ವರೆಗೂ ಹೊತ್ತು ಸಾಗುತ್ತವೆ. ತಮಗೆ ಆಹಾರವಾಗಬಲ್ಲ ಇಲಿ, ಹೆಗ್ಗಣಗಳಂತಹ ಪ್ರಾಣಿಗಳು ಹೆಚ್ಚಾಗಿ ಇರುವ ಜಾಗವನ್ನು

ಮುಂಚೆಯೇ ಗುರುತಿಸಿರುತ್ತವೆ. ಇಂತಹ ಜಾಗಕ್ಕೆ ಬೆಂಕಿ ತಂದು ನಿಯಂತ್ರಿತವಾಗಿ ಹರಡುತ್ತವೆ. ಬೆಂಕಿಯ ಶಾಖಕ್ಕೆ ಹೊರಬರುವ ಸಣ್ಣ ಸಣ್ಣ ಪ್ರಾಣಿಗಳನ್ನು ಸರಾಗವಾಗಿ ಹಿಡಿದು ಮುಕ್ಕುತ್ತವೆ. ಇಂತಹ ಸಂದರ್ಭದಲ್ಲಿ ತುಸುವೇ ಹೆಚ್ಚು ಗಾಳಿ ಬೀಸಿದರೆ ಬೆಂಕಿ ಹಕ್ಕಿಗಳ ನಿಯಂತ್ರಣವನ್ನು ಮೀರಿ ಕಾಡೆಲ್ಲ ಹರಡುತ್ತದೆ.

ಕಾಡ್ಗಿಚ್ಚು – ತಡೆಯುವುದು ಹೇಗೆ?

ಕಾಡ್ಗಿಚ್ಚಿನಿಂದಾಗುವ ವಿನಾಶವನ್ನು ತಡೆಯುವ ಅತ್ಯಂತ ಪರಿಣಾಮಕಾರಿ ಮಾರ್ಗವೆಂದರೆ ಕಾಡ್ಗಿಚ್ಚು ಆಗದಂತೆ ತಡೆಯುವುದು. ಮುಂಜಾಗ್ರತೆ ಹಾಗೂ ಮುನ್ನೆಚ್ಚರಿಕೆಯಿಂದ ಮನುಷ್ಯರಿಂದ ಉಂಟಾಗುವ ಕಾಡ್ಗಿಚ್ಚನ್ನು ತಡೆಯಲು ಸಾಧ್ಯ. ಇದರಲ್ಲಿ ಅರಣ್ಯ ಇಲಾಖೆಯ ಪರಿಶ್ರಮ ಎಷ್ಟಿದೆಯೋ, ಜನರ ಸಹಕಾರವೂ ಅಷ್ಟೇ ಮುಖ್ಯ.

ಅರಣ್ಯ ಸಿಬ್ಬಂದಿ ಹೇಳುವ ಪ್ರಕಾರ ಕಾಡ್ಗಿಚ್ಚನ್ನು ನಿಯಂತ್ರಿಸುವಲ್ಲಿ ಒಂದಷ್ಟು ತಾಂತ್ರಿಕ ಸಮಸ್ಯೆಗಳಿವೆ. ಮೊದಲನೆಯದಾಗಿ, ಎಷ್ಟೋ ಬಾರಿ ಬೆಂಕಿ ಹತ್ತಿರುವ ಕಾಡಿನ ಭಾಗಕ್ಕೆ ವಾಹನದಲ್ಲಿ ತೆರಳಲು ಸಾಧ್ಯವೇ ಇರುವುದಿಲ್ಲ, ನಡೆದೇ ಸಾಗಬೇಕು. ಬೆಂಕಿ ನಿಯಂತ್ರಿಸುವ ಪರಿಕರಗಳನ್ನು ಹೊತ್ತು ಆ ದುರ್ಗಮ ಹಾದಿಯಲ್ಲಿ ಕಾಲ್ನಡಿಗೆಯಲ್ಲಿ ಸಾಗಲು ತಗಲುವ ಸಮಯದಲ್ಲಿ ಬೆಂಕಿ ವ್ಯಾಪಕವಾಗಿ ಹರಡಿ ಬಿಟ್ಟಿರುತ್ತದೆ. ಹಾಗಾಗಿ ಅರಣ್ಯ ಇಲಾಖೆಯ ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶವಿರುವಂತೆ ಕಾಡಿನ ಎಲ್ಲಾ ಭಾಗಗಳನ್ನು ಸಂಪರ್ಕಿಸುವ ಮಾರ್ಗಗಳನ್ನು ಅಭಿವೃದ್ಧಿ ಪಡಿಸಬೇಕಿದೆ. ನನ್ನ ಪರಿಚಯದ RFO ಒಬ್ಬರು ಹಂಚಿಕೊಂಡ ಅನುಭವ ಇಲ್ಲಿ ತಿಳಿಸುವುದು ಔಚಿತ್ಯವೆನಿಸುತ್ತದೆ. ಅವರು ಕರ್ನಾಟಕದ ಗಡಿಭಾಗದ ವಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಮಯ. ಹಿಮವದ್ ಗೋಪಾಲಸ್ವಾಮಿ ಬೆಟ್ಟದ ಸಾಲಿಗೆ ಹೊಂದಿಕೊಂಡಂತೆ ಇದ್ದ ಇನ್ನೊಂದು ಬೆಟ್ಟದಲ್ಲಿ ಬೆಂಕಿ ಬಿದ್ದಿರುವುದಾಗಿ

ಇವರಿಗೆ ಮಾಹಿತಿ ಬರುತ್ತದೆ. ಆಗ ಸಮಯ ಸುಮಾರು ರಾತ್ರಿ ಒಂಬತ್ತು ಗಂಟೆ. ಅದಾಗಲೇ ಒಂದಷ್ಟು ಮಂದಿ ರಾತ್ರಿ ಬೀಟಿಗೆ ಬೇರೆ ಮಾರ್ಗಕ್ಕೆ ತೆರಳಿದ್ದರಿಂದಾಗಿ ಉಳಿದ ಸಿಬ್ಬಂದಿಯೊಡನೆ ಬೆಂಕಿ ನಿಯಂತ್ರಿಸಲು ಹೊರಟು ನಿಂತರಂತೆ. ಆದರೆ ದುರದೃಷ್ಟವೆಂದರೆ ಕಾಡಿನ ಆ ಭಾಗಕ್ಕೆ ರಸ್ತೆ ಇರಲಿ ಕಾಲುದಾರಿಯೂ ಇರಲಿಲ್ಲವಾಗಿತ್ತು. ಅಂತಹ ಕಗ್ಗತ್ತಲಲ್ಲಿ ಪರಿಕರಗಳನ್ನು ಹೊತ್ತು ದಾರಿ ಮಾಡಿಕೊಳ್ಳುತ್ತ ಕಾಡಿನಲ್ಲಿ ಬೆಟ್ಟ ಹತ್ತಲು ಗುಂಡಿಗೆ ಹಾಗೂ ದೇಹ ಎರಡೂ ಗಟ್ಟಿ ಇದ್ದರೆ ಮಾತ್ರ ಸಾಧ್ಯ. ಹೇಗೋ ಕಷ್ಟಪಟ್ಟು ಅವರು ಬೆಂಕಿ ಹತ್ತಿದ್ದ ಭಾಗಕ್ಕೆ ತಲುಪಿದರೆ ಅವರಿಗೆ ಮತ್ತೊಂದು ಆಘಾತ ಕಾದಿತ್ತು. ಇವರು ಬೆಟ್ಟದ ತುದಿ ತಲುಪಿದ ದಿಕ್ಕಿನಲ್ಲೇ ಗಾಳಿಯು ರಭಸವಾಗಿ ಬೀಸಲು ಆರಂಭಿಸಿತು. ಇವರಿದ್ದ ಬದಿಯಿಂದ ಬೆಂಕಿ ನಿಯಂತ್ರಿಸಲು ಹರಸಾಹಸ ಪಡುತ್ತಿದ್ದರೆ, ವಿರುದ್ಧ ದಿಕ್ಕಿನಲ್ಲಿ ಬೆಂಕಿ ಹಬ್ಬುತ್ತಲೇ ಇತ್ತು. ಆ ಬದಿಗೆ ನೇರ ಸಾಗಲು ಎರಡೂ ಕಡೆ ಪ್ರಪಾತ. ಮತ್ಯಾವ ಬದಲಿ ದಾರಿಯೂ ಇಲ್ಲ. ಇಷ್ಟೆಲ್ಲಾ ಸವಾಲುಗಳ ನಡುವೆ ಪ್ರಾಣದ ಹಂಗು ತೊರೆದು ಅರಣ್ಯ ರಕ್ಷಕರು ಹೋರಾಡಿದ ಫಲವಾಗಿ ಬೆಂಕಿಯನ್ನು ಆರಿಸಿದಾಗ ಬೆಳಗಿನ ಜಾವ ಮೂರು ಗಂಟೆಯಾಗಿತ್ತಂತೆ. ಈ ಘಟನೆ ಕೇಳಿದಾಗ ದೇಶದ ಅಪಾರ ನೈಸರ್ಗಿಕ ಸಂಪತ್ತಿನ ರಕ್ಷಣೆಗೆ ಹಗಲು ರಾತ್ರಿಯೆನ್ನದೆ ದುಡಿವ ನಮ್ಮ ಅರಣ್ಯ ಇಲಾಖೆಯ ಸಿಬ್ಬಂದಿಯ ಮೇಲಿದ್ದ ಗೌರವ ದುಪ್ಪಟ್ಟಾಯಿತು.

ಎರಡನೆಯದಾಗಿ, ಅರಣ್ಯ ಇಲಾಖೆಯಲ್ಲಿ ಬೆಂಕಿ ನಿಯಂತ್ರಿಸುವ ಆಧುನಿಕ ಉಪಕರಣಗಳ ಕೊರತೆ ಇದೆ. ಕೆಲವೊಮ್ಮೆ ಕನಿಷ್ಠ Fire jacket ಗಳೂ ಇಲ್ಲದಂತೆ ಬೆಂಕಿ ನಿಯಂತ್ರಿಸಲು ಹೋಗಿ ಅರಣ್ಯ ರಕ್ಷಕರು ಪ್ರಾಣ ಕಳೆದುಕೊಂಡದ್ದಿದೆ. ವಿದೇಶಗಳಲ್ಲಿರುವಂತೆ Drone based Fire extinguisher, Fire monitoring and alert systems, Satellite based wildfires monitoring ಗಳಂತಹ ಆಧುನಿಕ ವ್ಯವಸ್ಥೆಗಳು ಇಲಾಖೆಗೆ ತುರ್ತಾಗಿ ಬೇಕಿವೆ.

ಇವೆಲ್ಲದಕ್ಕೂ ಮೀರಿ, ಸಾರ್ವಜನಿಕರ ಸಹಕಾರ ಅತ್ಯವಶ್ಯಕ. ಕಾಡು ಕೇವಲ ಅರಣ್ಯ ಇಲಾಖೆಯ ಆಸ್ತಿಯಲ್ಲ. ಅದು ದೇಶದ ಆಸ್ತಿ, ಅದರ ಸಂರಕ್ಷಣೆ ಪ್ರತಿಯೊಬ್ಬ ನಾಗರೀಕನ ಜವಾಬ್ದಾರಿ. ಇದನ್ನರಿತು ಜನರೂ ಸಹ ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸಿದರೆ ಮಾತ್ರ, ನಮ್ಮ ನೈಸರ್ಗಿಕ ಸಂಪತ್ತನ್ನು ಮುಂದಿನ ಪೀಳಿಗೆಗೂ ಉಳಿಸಿಕೊಡಲು ಸಾಧ್ಯ. Peace on the Earth ಸಂಸ್ಥೆಯ ಅಮಿತ್ ರಾಯ್ ಹೇಳುವಂತೆ “ಮಾನವೀಯತೆಯು ಕಾಡ್ಗಿಚ್ಚು ಅಥವಾ ಕಾಳ್ಗಿಚ್ಚುಗಳಿಗೆ ಸಂವೇದನಾಶೀಲತೆಯನ್ನು ಕಳೆದುಕೊಳ್ಳಬಾರದು. ನಾವು ಎಚ್ಚೆತ್ತುಕೊಳ್ಳದಿದ್ದರೆ, ಜೀವವೈವಿಧ್ಯತೆಯ ನಷ್ಟ ಹಾಗೂ ಗಿಡಮೂಲಿಕೆಗಳು, ಪಕ್ಷಿಗಳು, ಪ್ರಾಣಿಗಳ ಅಳಿವು ಮತ್ತು ಮರಗಳು, ಪಕ್ಷಿಗಳು, ಪ್ರಾಣಿಗಳ ನೋವುಗಳು ಮಾನವೀಯತೆಯ ಅಳಿವಿನ ಆತಂಕಕಾರಿ ಸಂಕೇತವಾಗುತ್ತದೆ”.

ಲೇಖನ: ಶ್ರೀಕಾಂತ್ ಎ. ವಿ.

ಶಿವಮೊಗ್ಗ ಜಿಲ್ಲೆ



ಕಾಡಿನ ಕಥೆ

(ಬೆಂಕಿಯಿಂದ ಅರಣ್ಯರೋದನಕ್ಕಿಲ್ಲವೇ ಮುಲಾಮು? ಉಪವಲಯ ಅರಣ್ಯಾಧಿಕಾರಿರವರ ಅನುಭವ ಕಥನ)

ವರ್ಷದಿಂದಾಚೆ ನಡೆದ ಘಟನೆ:

ಫೆಬ್ರುವರಿ ತಿಂಗಳು ದಿನಾಂಕ ಮರೆತಿದೆ ಸಮಯ 11ರ ಆಸುಪಾಸಾಗಿತ್ತು, ಆಗಾಗಲೇ ಬಿಸಿಲು ತಾರಕಕ್ಕೇರಿತ್ತು. ನಾನು, ಧರ್ಮೇಶ, ಲಕ್ಕಪ್ಪ, ಮುತ್ತಪ್ಪ, ಶಂಕ್ರ, ಮಂಜ, ಪ್ರಮೋದ ಎಲ್ಲರೂ ಭದ್ರ ನದಿಯ ದಂಡೆಯಲ್ಲಿದ್ದ ಕಳ್ ಬೇಟೆ ತಡೆಯೋ ಕ್ಯಾಂಪಿನಲ್ಲಿ ಬೆಳಗಿನ ತಿಂಡಿ ತಿಂದು, ತಂತಮ್ಮ ಕೆಲಸದಲ್ಲಿ ಮಗ್ನವಾಗಿದ್ವೆವು. ನಾನು ಮಾವಿನ ಮರಕ್ಕೆ ಕಟ್ಟಿದ್ದ ಉಯ್ಯಾಲೆಯ ಮೇಲೆ ಕಾನೂರು ಹೆಗ್ಗಡತಿ ಕಾದಂಬರಿ ಓದುತ್ತಾ ಮಲಗಿದ್ದೆ, ಲಕ್ಕಪ್ಪ ದುರ್ಬೀನು ಹಿಡಿದು ಎದುರಿಗೆ ಮೇಯುತ್ತಿದ್ದ ಜಿಂಕೆಗಳನ್ನ ನೋಡುತ್ತಿದ್ದವನು ದುರ್ಬೀನು ಯಾವ ದಿಕ್ಕಿಗೆ ತಿರುಗಿಸಿದ್ದನೋ ಏನೋ, ಒಮ್ಮೆಗೆ ಹೆಬ್ಬೆಗಿರಿಗೆ ಬೆಂಕಿ ಬಿದ್ದಿದೆ ಅಂತಾ ಕೂಗುತ್ತಾ ಓಡಿಬಂದ. ಹೆಬ್ಬೆಗಿರಿ ನಾವಿದ್ದ ಕ್ಯಾಂಪಿಂದ ಪೂರ್ವ ದಿಕ್ಕಿಗೆ ಸಮುದ್ರ ಮಟ್ಟದಿಂದ 1300 ಮೀಟರ್ ಗಿಂತಲೂ ಹೆಚ್ಚು ಎತ್ತರ ಹಾಗೂ 6 ಕಿಲೋಮೀಟರ್ ದೂರದಲ್ಲಿತ್ತು. ಕಾಡಿಗೆ ಬೆಂಕಿ ಬಿದ್ದಿದೆ ಎಂದ ಕೂಡಲೆ ಉಟ್ಟ ಬಟ್ಟೆಯಲ್ಲಿಯೇ ಓಡುವಂತೇನು ಇರಲಿಲ್ಲ, ಅಷ್ಟು ದೂರ, ಎತ್ತರದ ಗುಡ್ಡಕ್ಕೆ ಏರಲು ಸೂಕ್ತ ಬಟ್ಟೆ, ಬೂಟು ಧರಿಸಿ, ಉಣ್ಣೆಯಿಂದ ರಕ್ಷಣೆಗೆ ಬೇವಿನ ಎಣ್ಣೆ ಅಥವಾ ಇಲಾಖೆ ಕೊಟ್ಟಿದ್ದ ಕೆಮಿಕಲ್ ದ್ರಾವಣ ಸವರಿಕೊಂಡು, ಬೆಂಕಿ ಆರಿಸಲು ಸೊಪ್ಪು ಕಡಿಯಲು ಮಚ್ಚು, ಎದುರಿಗೆ ಬರುವ ಆನೆಗಳಿಂದ ರಕ್ಷಣೆಗೆ ಬಂದೂಕು ಒಯ್ಯಬೇಕಿತ್ತು.

ನಡೆದು ಹೋದರೆ ಕನಿಷ್ಠ 3 ಗಂಟೆ ಸಮಯ, ಜೀಪಿನಲ್ಲಿ ಹೋಗಬೇಕೆಂದಿದ್ದರೆ 25 ಕಿಲೋಮೀಟರ್ ದೂರದ ದಾರಿಯನ್ನ 2 ಗಂಟೆಗಳ ಕಾಲ ಸುತ್ತಿ ಬಳಸಿ ಕಾಫಿಡೇ ಮಾಲೀಕರ ಮಾಲಿಕತ್ವದ ಎಸ್ಟೇಟ್ ತಲುಪಿ ಅಲ್ಲಿಂದ ಮತ್ತೆ 1 ಕಿಲೋಮೀಟರ್ ಗುಡ್ಡ ಹತ್ತಬೇಕಿತ್ತು. ನಾವಿದ್ದ ಜಾಗಕ್ಕೆ ಜೀಪು ಬರಲು 1 ಗಂಟೆ ಸಮಯ ಹೀಗೆ ಯಾವ ಮಾರ್ಗದಲ್ಲಾದರೂ ಕನಿಷ್ಠ 3 ಗಂಟೆ. ಆ ಬಿಸಿಲಿನಲ್ಲಿ ನಡೆದು ಗುಡ್ಡ ಹತ್ತಿ ಸುಸ್ತಾಗುವುದಕ್ಕಿಂತ ನಮ್ಮ ಜೀಪಿನ (forest invader) ಮೂಲಕ ಸೊಂಟ ಉಳುಕಿಸಿಕೊಂಡಾದರೂ ಅಂಕು ಡೊಂಕಾದ ರಸ್ತೆಯಲ್ಲಿಯೇ ಸಾಗುವುದು ಸೂಕ್ತವೆಂದು ತೀರ್ಮಾನಿಸಿ ಜೀಪ್ ಏರಿ ಹೊರಡಲು ನಿರ್ಧರಿಸಿ ನಾವಿದ್ದ ಜಾಗಕ್ಕೆ ಜೀಪ್ ಬರುವಂತೆ ಬುಲಾವ್ ನೀಡಿ, ಆ ಬೆಂಕಿಯೊಂದಿಗಿನ ಸರಸಕ್ಕೆ ನಾವು ತಯಾರಾಗಲು ಅಣಿಯಾದೆವು.

ಕಾಡಿನಲ್ಲಿ ರಸ್ತೆ ಎಷ್ಟೆ ಚಂದವಿದ್ದರೂ ವೇಗವಾಗಿ ಜೀಪ್ ಚಲಿಸುವಂತಿಲ್ಲ; ಕಾರಣ ಅತಿ ವೇಗದಿಂದ ಪ್ರಾಣಿಗಳಿಗೆ ಹಾಗೂ ನಮಗೂ ತೊಂದರೆಯಾಗುತ್ತದೆ ಎಂದು. ಅಂತೂ ಸುತ್ತಿ ಬಳಸಿ ಎಸ್ಟೇಟ್ ತಲುಪಿದೆವು. ಸಮಯ ಮಧ್ಯಾಹ್ನ 2 ಗಂಟೆ; ಹಸಿವೂ ಹೆಚ್ಚಾಗಿತ್ತು. ಬೆಳಗ್ಗೆ ತಿಂದಿದ್ದ ತಿಂಡಿ ಅದಾಗಲೇ ಜೀರ್ಣವಾಗಿ ಸಣ್ಣ ಕರುಳಿನಿಂದ ದೊಡ್ಡಕರುಳು ತಲುಪಿಯಾಗಿತ್ತು. ಗಡಿಬಿಡಿಯಲ್ಲಿ ತಂದಿದ್ದ ಒಂದು ಬಾಟಲಿ ನೀರಿನ್ನ 7-8 ಜನ ಕುಡಿದು ಬೆಂಕಿಯ ಕಡೆಗೆ ಓಡಲಾರಂಭಿಸಿದೆವು. ಹೆಬ್ಬೆಗಿರಿ ಶೋಲಾ ಅರಣ್ಯವಾದ್ದರಿಂದ ಹುಲ್ಲುಗಾವಲಿನಲ್ಲಷ್ಟೆ ಬೆಂಕಿ ಉರಿಯುತ್ತಾ ನೂರಾರು ಎಕರೆಯಷ್ಟು ಹುಲ್ಲುಗಾವಲನ್ನು ಬೂದಿ ಮಾಡುತ್ತಾ ಮುಂದೆ ಸಾಗುತ್ತಿತ್ತು. ಬೆಂಕಿ ಹುಲ್ಲುಗಾವಲು ದಾಟಿದರೆ ಕೆಳಗಿದ್ದ ಎಲೆ ಉದುರುವ ಕಾಡಿಗೆ ಹಬ್ಬಿ ಸಾವಿರಾರು ಎಕರೆ ಅರಣ್ಯ ಭಸ್ಮವಾಗುವುದರಲ್ಲಿತ್ತು. ಹಾಗಾಗಿ ನಮ್ಮ ಸವಾಲು ಬೆಂಕಿಯನ್ನು ಹುಲ್ಲುಗಾವಲಿನಲ್ಲಿಯೇ ನಂದಿಸುವುದಾಗಿತ್ತು.

ಎಲ್ಲರೂ ಈಚಲ ಗಿಡದ ಗರಿಗಳನ್ನು ಕುಯ್ದು ಬೆಂಕಿ ಹರಡುತ್ತಿದ್ದ ದಿಕ್ಕಿನೆಡೆಗೆ ಓಡಿ ಬೆಂಕಿಯ ಮೇಲೆ ಬಡಿಯತೊಡಗಿದೆವು. ಬೆಂಕಿ ಬಡಿಯುತ್ತಾ ಮುಂದೆ ಸಾಗುತ್ತಾ ಒಬ್ಬರಿಗೊಬ್ಬರು ಕಾಣದಷ್ಟು ಮುಂದೆ ಸಾಗಿಯಾಗಿತ್ತು. ಸರಿಸುಮಾರು 2 ಗಂಟೆಗಳ ಕಾಲ ಖಾಲಿ ಹೊಟ್ಟೆಯಲ್ಲಿಯೇ ಬೆಂಕಿ ಬಡಿದಿದ್ದರಿಂದ ಡಿಹೈಡ್ರಾಷನ್ ಆಗಿ ನಿತ್ರಾಣಗೊಂಡಿದ್ದ



ನಾನು ಕುಸಿದು ಬಿದ್ದಿದ್ದೆ. ಸ್ವಲ್ಪವಾದರು ನೀರು ಸಿಕ್ಕರೆ ಮಾತ್ರ ಬದುಕಿಕೊಳ್ಳಬಹುದೇನೋ ಎನ್ನುವಂತ ಸ್ಥಿತಿ ತಲುಪಿದ್ದೆ. ನಮ್ಮ ಹುಡುಗರಿಗಾಗಿ ಕೂಗಿದೆ, ಧ್ವನಿ 10 ಮೀಟರ್ ಗಿಂತ ಹೆಚ್ಚು ದೂರ ಹೋಗಿಸುವಷ್ಟು ಶಕ್ತಿ ಇಲ್ಲವಾಗಿತ್ತು.

ನಾವು ನೋಡುವ ಎಲ್ಲ ನದಿಗಳ ಮೂಲಗಳು ಈ ಶೋಲಾ ಅರಣ್ಯಗಳೇ ಆಗಿರುತ್ತವೆ, ಹಾಗಾಗಿ ಅಲ್ಲಿಯೇ ನೀರಿನ ಮೂಲಕ್ಕಾಗಿ ಹುಡುಕಾಡಿದೆ. ಪ್ರತಿ ವರ್ಷ ಹುಲ್ಲುಗಾವಲಿಗೆ ಬೆಂಕಿ ಬೀಳುತ್ತಿದ್ದುದರಿಂದಲೋ ಏನೋ ಬೇಸಿಗೆಯಲ್ಲಿ ನೀರು ಜಿನುಗಿಸುವ ಸಾಮರ್ಥ್ಯವನ್ನು ಕಳೆದುಕೊಂಡಿತ್ತೆನಿಸುತ್ತದೆ. ಆದರೂ ಒಂದು ಕಣಿವೆಯಲ್ಲಿ ಹಾವಸೆ ಸಸ್ಯಗಳ ಮೇಲಿಂದ ನೀರಿನ ಹನಿಗಳು ಜಿನುಗುತ್ತಿದ್ದುದ ಕಂಡೆ. ಬೊಗಸೆ ಹಿಡಿದರೆ ಬೊಗಸೆ ತುಂಬುವಷ್ಟು ನೀರೇನು ಬರುತ್ತಿರಲಿಲ್ಲವಾದ್ದರಿಂದ ಕಡೆಗೆ ನೇರವಾಗಿ ನಾಲಿಗೆಯ ಮೇಲೆ ನೀರಿನ ಹನಿಗಳು ಬೀಳುವಂತೆ ಮಾಡಿ ನಾಲಿಗೆ ಒದ್ದೆ ಮಾಡಿಕೊಂಡೆ. ಜೀವ ಉಳಿದಂತಾಯ್ತು. ನಂತರ ಕಾಫಿಡೇ ಎಸ್ಟೇಟ್ ಮ್ಯಾನೇಜರ್ ಗೆ ಕರೆ ಮಾಡಿ ನಾ ಇದ್ದ ಸ್ಥಳ ಮತ್ತು ಸ್ಥಿತಿ ವಿವರಿಸಿದೆ. ಅಲ್ಲಿನ ಕಾರ್ಮಿಕರು ಬಾಟಲಿಗಳಲ್ಲಿ ನೀರು ತುಂಬಿಸಿ ನಾ ಇದ್ದ ಸ್ಥಳ ಹುಡುಕಿ ಬಂದು ನೀರು ಕುಡಿಸಿದರು. ಅವರ ಹಿಂದೆ ಹುಲ್ಲುಗಾವಲಿಗೆ ಹಬ್ಬಿದ್ದ ಬೆಂಕಿಯನ್ನೆಲ್ಲಾ ನಂದಿಸಿ, ನೀರು ಕುಡಿದು ಹೆಮ್ಮೆಯಿಂದ ನಿಂತಿದ್ದರು ನಮ್ಮ ಹುಡುಗರು-ಹಸಿರ ಉಸಿರುಳಿಸುವ ಯೋಧರು.

ಲೇಖನ: ಶಂಕರ್ ಹೆಬ್ಬೆ

ಮಗುವಿನೊಂದಿಗೆ ಲಿಂಗಾಂಬುಧಿ ಕೆರೆಯಲ್ಲೊಂದು ಸುತ್ತು

ಬಹಳ ಸಮಯದ ನಂತರ ಹಕ್ಕಿಗಳ ಚಿತ್ರ ತೆಗೆಯಲು ಒಂದು ಭಾನುವಾರ ಎಂಟರ ಸಮಯಕ್ಕೆ ಮನೆಯಿಂದ ಹೊರಟೆ, ನನ್ನ ನಾಲ್ಕು ವರ್ಷದ ಮಗಳು ಪರ್ಣಿಕಾ ನನ್ನ ಜೊತೆಯಾದಳು. ಇಬ್ಬರೂ ಲಿಂಗಾಂಬುಧಿ ಕೆರೆ ತಲುಪಿದೆವು. ಅವಳ ಕೈಯಲ್ಲಿ DSC H55 ಪಾಯಿಂಟ್ ಅಂಡ್ ಶೂಟ್ (Point and shoot) ಕ್ಯಾಮೆರಾ ಕೊಟ್ಟು, ನಾನು ನಿಕಾನ್ ಕ್ಯಾಮೆರಾಗೆ 300 ಎಂ ಎಂ ಮಸೂರ ಜೋಡಿಸಿ ಫೋಟೋಗ್ರಫಿಗೆ ಅಣಿಯಾದೆವು. ಪ್ರವೇಶ ದ್ವಾರದಿಂದ ಇಬ್ಬರೂ ಒಳಹೊಕ್ಕೆವು. ಒಂದೆರಡು ಮೈನಾಗಳು ಹಾರಿ ಹೋದವು, ಅಳಿಲುಗಳು ನಮ್ಮ ಕಣ್ಣೆದುರೇ ರಸ್ತೆ ದಾಟಿ ಓಡಿದವು. ನಾವು ನೀರಿನ ಬಳಿ ಹೋಗಿ ಕುಳಿತೆವು. ನಮ್ಮ ಮಸೂರದ ಪರಿಧಿಯನ್ನು ಮೀರಿ ಹಕ್ಕಿಗಳು ಆಚೆ ಕೂತಿದ್ದವು. ನಾನು ಫೋಟೋ ತೆಗೆಯಲು ಯತ್ನಿಸಿ ವಿಫಲನಾದೆ. ನನ್ನ ಮಗಳು ಅವಳ ಕೈಯಲ್ಲಿದ್ದ ಕ್ಯಾಮೆರಾದಲ್ಲಿ ಏನನ್ನೋ ತೆಗೆಯುವವಳಂತೆ ಕ್ಲಿಕ್ಕಿಸುತ್ತಿದ್ದಳು. ನಾನು ಅವಳ ಕಡೆ ನೋಡಿ ಪ್ರೋತ್ಸಾಹಿಸುವಂತೆ ಮುಗುಳ್ನಕ್ಕು ಅಷ್ಟೇನು ಗಮನ ಕೊಡದೆ ಸುಮ್ಮನಾದೆ. ಆದರೆ ಅದೇ ಫೋಟೋವನ್ನು ಕಂಪ್ಯೂಟರಿಗೆ ಹಾಕಿ ನೋಡಿದಾಗ ಅವಳು ತೆಗೆದ ಚಿತ್ರಗಳು ಹುಬ್ಬೇರುವಂತಿದ್ದವು!

ಇಲ್ಲೇನು ಇಲ್ಲ ಎಂದು ಹಿಂತಿರುಗುವಾಗ ಒಂದೆರಡು ಹರಟೆ ಮಲ್ಲ ಹಕ್ಕಿಗಳು ಕುಳಿತಂತೆ ಮಾಡಿ ಹಾರಿಹೋದವು. ಮರದ ಮೇಲೆ ತುಂಬಾ ಹತ್ತಿರಕ್ಕೆ ಕುಳಿತಿದ್ದ ಈ ಹರಟೆಮಲ್ಲನನ್ನು ಸೆರೆ ಹಿಡಿದೆ. ಅಳಿಲುಗಳು ಓಡುವುದನ್ನು ನೋಡಿ ಮಗಳು ಅಪ್ಪ ಎಲ್ಲ ಹೊರಟೋದ್ವು ಅಲ್ವಾ ಎಂದಳು. ಗಲಾಟೆ ಮಾಡಬೇಡ ಮತ್ತೆ ಬರುತ್ತವೆ ಇರು ಎಂದೆ. ಅದಕ್ಕೆ ಅವಳು ನನಗೆ ಬಗ್ಗಲು ಹೇಳಿ ಕಿವಿಯಲ್ಲಿ "ಇನ್ನೊಂದ್ಸಲ ಬರುವಾಗ ಅಳಿಲಿನ ಊಟ ತೆಗೆದುಕೊಂಡು ಬರೋಣ ಅದು ಊಟ ಮಾಡುವಾಗ ಅದರ ಫೋಟೋ ತೆಗೆದು ಬಿಡೋಣ" ಎಂದು ಫೋಟೋಗ್ರಫಿಗೆ ಉಪಾಯ ಹೇಳಿದಳು. ಎದುರುಗಡೆಯಿಂದ ಬಂದ ಹಿರಿಯರೊಬ್ಬರು ಕವರ್ ನಲ್ಲಿ ಒಂದಿಷ್ಟು ಅಕ್ಕಿಯನ್ನು ತಂದು ಅಲ್ಲಲ್ಲ ಹಾಕಿದರು. ಮಗಳಿಗೆ ಕ್ಯಾಮೆರಾ ಕೊಟ್ಟಿರುವುದನ್ನು ನೋಡಿ ಆಟಿಕೆಯೊ ಅಥವಾ ನಿಜವಾದದ್ದೋ ಎಂದು ವಿಚಾರಿಸಿ ಅವಳ ಹೆಸರನ್ನು ಕೇಳಿ ಹೋದರು. ಅವರು ಹೋಗುತ್ತಲೂ ಅಳಿಲು ಹರಟೆಮಲ್ಲ ಎರಡೂ ಅಲ್ಲಿಗೆ ಬಂದು ಅಕ್ಕಿಯನ್ನು ತಿನ್ನಲಾರಂಭಿಸಿದವು, ಅವುಗಳ ಛಾಯಾಚಿತ್ರವನ್ನು ಕ್ಲಿಕ್ಕಿಸಿದೆವು. ನಂತರ ಇಬ್ಬರೂ ಹಾಗೆ ಮುಂದೆ ಸಾಗುವಾಗ ಮರದ ಹಿಂದೆ ಯಾವುದೋ ಹಕ್ಕಿ ಕುಳಿತಂತಾಯಿತು. ಗುರಿ ಹಿಡಿದು ಒಂದು ಫೋಟೋ ತೆಗೆಯುವಷ್ಟರಲ್ಲೇ ಅದು ಅಲ್ಲಿಂದ ಹಾರಿಹೋಯಿತು. ತೆಗೆದ ಚಿತ್ರವನ್ನು ಮತ್ತೆ ಗಮನಿಸಿ ನೋಡಿದಾಗ ಏಷ್ಯನ್ ಬ್ರೌನ್ ಫ್ಲೈ ಕ್ಯಾಚರ್ ಅದು ಎಂದು ತಿಳಿಯಿತು. ಮುಂದೆ ಸಾಗಿ ಅಲ್ಲಿ ಇದ್ದ ಒಂದು ಬೆಂಚಿನ ಮೇಲೆ ಕುಳಿತೆವು. ಅಲ್ಲೇ ಇದ್ದ ಬೊಗನ್ ವಿಲ್ಲಾ ನನ್ನ ಮಗಳಿಗೆ ಪರಿಚಿತ ಹೂವು ಹಾಗಾಗಿ ಪೊದೆಯಂತಿದ್ದ ಅದರ ಚಿತ್ರ ತೆಗೆದಳು ಮಗಳು.

© ಡಾ. ದೀಪಕ್ ಭ., ಮೈಸೂರ್

© ಡಾ. ದೀಪಕ್ ಭ., ಮೈಸೂರ್

ಹಿಂದಿನ ಮರದ ಮೇಲೆ ಏನೋ ಓಡಾಡಿದಂತೆನಿಸಿತು, ಅಲ್ಲಿ ನೋಡುತ್ತಲು ಏನೋ ಕೆಂಪು ಮೂತಿ ಕಂಡಂತಾಯಿತು. ಸ್ವಲ್ಪ ಹೊತ್ತು ದಿಟ್ಟಿಸಲು ಅದು ಕಂಚು ಕುಟಿಗ ಎಂದು ತಿಳಿಯಿತು. ಅದರ ಕ್ರಿಯಾಶೀಲತೆಯನ್ನು ಹಾಗೇ ನೋಡುತ್ತಾ ಕುಳಿತುಬಿಟ್ಟೆ. ಮಗಳು ಅಪ್ಪ ನನ್ನ ಕ್ಯಾಮೆರಾದಲ್ಲಿ ಆ ಪಕ್ಷಿ ಬರ್ತಿಲ್ಲ ಏನ್ ಮಾಡ್ಲಿ ಎಂದು ಕೇಳಿದಳು. ಅಲ್ಲೇ ಇದ್ದ ಇರುವೆ ಗೂಡು ತೋರಿಸಿ ಅದರ ಫೋಟೋ ತೆಗಿ ಎಂದೆ, ಆಯ್ತುಪ್ಪ ಪಕ್ಷಿತರ ಇರುವೆ ಗೂಡು ಹಾರಿಹೋಗೋದಿಲ್ಲ ಚೆನ್ನಾಗಿ ತೆಗಿಬಹುದು ಅಂತ ಅದರ ಮುಂದೆ ಕೂತಳು. ಕಂಚು ಕುಟಿಗ ಅಲ್ಲೇ ಬಿಟ್ಟಿದ್ದ ಒಂದು ಹಣ್ಣನ್ನು ಕೊಕ್ಕಿನಲ್ಲಿ ತೆಗೆದು ಕೊಂಡಿತು, ಅದನ್ನು ಕೊಂಬೆಗೆ ಬಡಿಯಿತು, ನಂತರ ನುಂಗಿತು. ನಂಗೆ ಒಂದು ಕ್ಷಣ ಅದೇಕೆ ಕೊಂಬೆಗೆ ಬಡಿಯಿತೋ ತಿಳಿಯಲಿಲ್ಲ. ನೊಣ ಹಿಡುಕಗಳು ನೊಣವನ್ನ ಹಿಡಿದ ನಂತರ ಆ ರೀತಿ ಬಡಿಯುವುದನ್ನು ನೋಡಿದ್ದೆ. ಕಂಚು ಕುಟಿಗ ಹಣ್ಣನ್ನು ಹಾಗೇಕೆ ಬಡಿಯಿತು ಎಂದು ಯೋಚಿಸುತ್ತಿರುವಾಗ ಮಗಳು ಅಪ್ಪ ಇರುವೆ ಗೂಡು ನೋಡಿ ಎಂದು ಅವಳು ತೆಗೆದಿದ್ದ ಇರುವೆ ಗೂಡು ತೋರಿಸಿದಳು. ವಾವ್ ತುಂಬಾ ಚೆನ್ನಾಗಿ ತೆಗೆದಿರುವೆ ಮಗಳೇ ಎಂದು ಅವಳ ಕಾರ್ಯವನ್ನು ಶ್ಲಾಘಿಸಿ ಅಲ್ಲೇ ಕೂತಿದ್ದ ಕಂಚುಕುಟಿಗವನ್ನು ಮತ್ತೆ ನೋಡಲಾರಂಭಿಸಿದೆ. ಕ್ಯಾಮೆರಾದಲ್ಲಿ ತೆಗೆದಿದ್ದ ಕೆಲವು ಫೋಟೋಗಳನ್ನು ನೋಡುತ್ತಿರುವಾಗ ಕೊಂಬೆಗೆ ಬಡಿದಾಗ ಒಳಗಿರುವ ಬೀಜ ಹೊರ ಬರುತ್ತಿರುವುದು ಕಂಡಿತು.

ಅದರ ಹಿಂದೆ ಇನ್ನೊಂದು ಬಿಳಿ ಹುಬ್ಬಿನ ಕುಟಿಗ ಕೂತಿತ್ತು. ವಾವ್ ಎಂದು ಅದನ್ನು ಸೆರೆ ಹಿಡಿದೆ. ಬೂದು ಮಂಗಟ್ಟೆ ಹಾರಿ ಬಂದು ಅದೇ ಮರದಲ್ಲಿ ಕುಳಿತುಕೊಂಡಿತು. ವೈಯಾರದಿಂದ ಒಂದು ಹಣ್ಣನ್ನು ಕಿತ್ತುಕೊಂಡು ಗುಳುಂ ಮಾಡಿತು. ಛಾಯಾಗ್ರಹಣಕ್ಕೆ ಹೋದಾಗ ಕ್ಯಾಮೆರಾ ಹಿಡಿದವರು ಗೆಳೆಯರಾಗಿ ಬಿಡುತ್ತಾರೆ. ಇನ್ನೊಬ್ಬರು ಅಲ್ಲಿಗೆ ಕ್ಯಾಮೆರಾ ಹಿಡಿದು ಏನಿದೆ ಅಲ್ಲಿ ಎನ್ನುತ್ತಾ ಬಂದರು. ಕುಟುರ (ಕಾಪಾರ್ ಸ್ಮಿತ್) ಎಂದೆ. ಅವರದನ್ನು ತೆಗೆಯುತ್ತಿರುವಾಗ ಅಲ್ಲೇ ಇದ್ದ ಸಿಮೆಂಟ್ ಬೆಂಚಿನ ಮೇಲೆ ಕೆಂಪುಕೊರಳಿನ ನೊಣಹಿಡುಕ (ಟಿಕಲ್ಸ್ ಬ್ಲೂ) ಬಂದು ಕುಳಿತಿತ್ತು. ಕೈಯಲ್ಲಿ ಕ್ಯಾಮೆರಾ ಇರೋವಾಗ ಮತ್ತೇನು ಕೆಲಸ ಎಂದು ಅದನ್ನೂ ಕ್ಲಿಕ್ಕಿಸಿದೆ.

ಗಂಟೆ ಹತ್ತಾಗಿತ್ತು ತಿಂಡಿಯ ಸಮಯವಾದ್ದರಿಂದ ಮಗಳು ಸಹ ಜೊತೆ ಇದ್ದುದರಿಂದ ಹಸಿದಿರಬಹುದು ಎಂದು ಅಲ್ಲಿಂದ ಇಬ್ಬರೂ ಮನೆಗೆ ಹಿಂತಿರುಗಿದೆವು.

ಲೇಖನ: ಡಾ. ದೀಪಕ್ ಭ.
ಮೈಸೂರು ಜಿಲ್ಲೆ

ಮಡಕೆ ಮಾಡುವ ಹುಳು

ಹಿಂದಿನ ಅಂಕಣದಲ್ಲಿ ಕೇಳಿದ ಪ್ರಶ್ನೆಗೆ ಮೊದಲು ಉತ್ತರಿಸಿ ನಂತರ ಇವತ್ತಿನ ಕಥೆ ಹೇಳ್ತಿನಿ.

ಪ್ರಶ್ನೆ: ಕಣಜವು ಜೇಡವನ್ನು ಪೂರ್ತಿಯಾಗಿ ಕೊಂದು, ನಂತರ ಗೂಡಿನಲ್ಲಿ ತಂದಿಡಬಹುದಾಗಿತ್ತಲ್ಲವೇ? ಅದೇಕೆ ಪ್ಯಾರಲೈಜ್ ಮಾಡಿಟ್ಟಿತು ಎಂದು ಊಹಿಸಬಲ್ಲಿರಾ?

ಉತ್ತರ: ಒಂದು ವೇಳೆ ಕಣಜವು ಜೇಡ/ಕಂಬಳಿ ಹುಳುಗಳನ್ನು ಕೊಂದು ಆಮೇಲೆ ಗೂಡಿನಲ್ಲಿ ತಂದಿಟ್ಟರೆ, ಕಣಜದ ಮೊಟ್ಟೆಯಿಂದ ಲಾರ್ವ ಹೊರ ಬರುವವರೆಗೆ ಜೇಡ/ಕಂಬಳಿ ಹುಳುಗಳ ಕಳೇಬರಗಳು ಕೊಳೆಯಲು ಪ್ರಾರಂಭಿಸಬಹುದು. ಅದೇ ಪ್ಯಾರಲೈಜ್ ಮಾಡಿಟ್ಟರೆ ಜೇಡ/ಕಂಬಳಿ ಹುಳು ಜೀವಂತವಾಗಿದ್ದರೂ ಅವುಗಳು ಅಲ್ಲಾಡಲಾರವು. ಕಣಜದ ಮರಿ ತಾಜಾ ತಾಜಾ ತಿಂಡಿಯನ್ನು ಸವಿಯಬಹುದು!

ಕಣಜವು ಎಂಥ ಪರಿಪೂರ್ಣ ತಾಯಿಯಲ್ಲವೇ? ಇಂಥ ಕಣಜವನ್ನು ಕುಂಬಾರ ಕಣಜವೆಂದು ತಿಳಿದು ಅದರ ಬಗ್ಗೆ ತಪ್ಪು ಮಾಹಿತಿ ನೀಡಿದೆನಲ್ಲವೇ? ನನಗೆ ಅಪರಾಧಿ ಪ್ರಜ್ಞೆ ಕಾಡತೊಡಗಿತು. ಮತ್ತೆ ಮಗನನ್ನು ಹುಡುಕತೊಡಗಿದೆ ಸರಿಯಾಗಿ ತಿಳಿಸಿ ಹೇಳಲು. ಇನ್ನು ಇವನು ಎಂದಿಗಿಂತ ತುಸು ಹೆಚ್ಚೇ ಪ್ರಶ್ನೆ ಕೇಳುತ್ತಾನೆ ಎಂದು ಸ್ವಲ್ಪ ಮುಂಚಿತವಾಗಿಯೇ ಓದಿ ತಿಳಿದುಕೊಂಡರೆ ಒಳಿತೆನಿಸಿತು. ಇವನ್ಯಾಕೋ ನನ್ನ ಶಾಲೆಯ ಗುರುಗಳಿಗಿಂತ ಹೆಚ್ಚಾಗಿ ನನ್ನನ್ನು ಭಯ ಪಡಿಸಿದ್ದಾನೆ ಎಂದೆನಿಸಿ ಇನ್ನೂ ಹೆಚ್ಚು ಆತಂಕವಾಗತೊಡಗಿತು. ಭಕ್ತ ಕುಂಬಾರ ಸಿನಿಮಾದಲ್ಲಿ ಅಣ್ಣಾವ್ರು ವಿಠಲ ಪಾಂಡುರಂಗ ಎನ್ನುತ್ತಾ ತನ್ನ ಮಗುವನ್ನು ಕೂಡ ಕೆಸರಿನಲ್ಲಿ ಬಿದ್ದುದನ್ನು ಗಮನಿಸದಷ್ಟು ಭಕ್ತಿಪರವಶವಾಗಿರುತ್ತಾನೆ. ಆದರೆ ಇಲ್ಲೊಬ್ಬ ಕುಂಬಾರ್ತಿ ಮುಂದೆ ಹುಟ್ಟುವ ತನ್ನ ಮಗುವಿಗಾಗಿ ಭದ್ರವಾದ ಮಣ್ಣಿನ ಮಡಕೆಯನ್ನು ತಯಾರಿಸುತ್ತದೆ. ಅದಕ್ಕೇ ಈ ಹೆಸರು ಕುಂಬಾರ ಹುಳು.

ನಿಜ ಹೇಳಬೇಕೆಂದರೆ ಇಲ್ಲಿಯವರೆಗೆ ಮಣ್ಣಿನ ಗೂಡು ಕಟ್ಟುವ ಹುಳುವೆಂದರೆ ಅದು ಕುಂಬಾರ ಕಣಜವೆಂದೇ ತಿಳಿದುಕೊಂಡಿದ್ದೆ. ಅದೂ ಅಲ್ಲದೆ ಒಂದೇ ಹುಳುವು ಮಡಕೆಯ ತರಹವೂ ಮತ್ತು ಉದ್ದುದ್ದ ಕೊಳವೆಗಳ ತರಹವೂ ಗೂಡು ಕಟ್ಟುತ್ತದೆಯೆಂದು ತಪ್ಪು ತಿಳಿದುಕೊಂಡಿದ್ದೆ. ತಪ್ಪು ಅನ್ನುವುದಕ್ಕಿಂತಲೂ ಅದರ ಬಗ್ಗೆ ನಿರ್ಲಕ್ಷ್ಯವಹಿಸಿದ್ದೆ. ಆದರೆ ಪ್ರತಿ ಸಲವೂ ನನಗೆ ಈ mud dauber wasp ಗೂಡು ಕಟ್ಟುತ್ತಿರುವ ದೃಶ್ಯ ನೋಡಲು ಸಿಕ್ಕಿತ್ತೆ ವಿನಃ ಕುಂಬಾರ ಹುಳು ಗೂಡು ಕಟ್ಟುವ ದೃಶ್ಯ ನೋಡಲು ಸಿಕ್ಕಿರಲೇ ಇಲ್ಲ. ಹೀಗಾಗಿ ಬೆಳಗಾಗುವುದರೊಳಗೆ ಒಮ್ಮೊಂದೊಮ್ಮೆಗೆ ಧುತ್ತೆಂದು ಮಣ್ಣಿನ ಮಡಕೆಗಳು ಗೋಡೆಯ ಮೇಲೆಯೋ, ಕಿಡಕಿಗಳ ಸಂದಿಗಳಲ್ಲಿಯೋ, ಪುಸ್ತಕಗಳ ಶೆಲ್ಫ್ ಗಳಲ್ಲಿಯೋ ಪ್ರತ್ಯಕ್ಷವಾಗುತ್ತಿತ್ತೇ ಹೊರತು ಹುಳುವಿನ ದರ್ಶನವೇ ಆಗಿರಲಿಲ್ಲ! ಒಂದು ಸಲ ಮಡಕೆಯ ಬಾಯಿ ಮುಚ್ಚಿದ್ದು ಕಾಣಿಸುತ್ತಿತ್ತು; ಮತ್ತೊಮ್ಮೆ ಖಾಲಿ ಮಡಕೆ ಬಾಯಿ ತೆರೆದು ಕೂತಿರುತ್ತಿತ್ತು. ಅದರ ರಹಸ್ಯ ಮಾತ್ರ ಮಡಕೆಯಲ್ಲಿಯೇ ಹುದುಗಿ ಕುಳಿತಿತ್ತು. ಬಹುಷಃ ಒಂದೇ ಕಡೆ ಕೊಳವೆಯಾಕಾರದ ಬಹಳಷ್ಟು ಗೂಡುಗಳನ್ನು ನಿರ್ಮಿಸಲು ತಗಲುವ ಸಮಯ ಸಹಜವಾಗಿಯೇ ಒಂದು ಮಡಕೆ ನಿರ್ಮಿಸಲು ಬೇಕಾಗುವ ಸಮಯಕ್ಕಿಂತ ಹೆಚ್ಚು, ಹೀಗಾಗಿ ಕುಂಬಾರ ಹುಳು ಗೂಡು ಕಟ್ಟುವ ದೃಶ್ಯ ಸಿಗದೇ ಇದ್ದಿರಬಹುದು ಎಂದು ಊಹಿಸಿದೆ.

ಈ ಊಹೆ ಸುಳ್ಳಾಗಿದ್ದು ಕಳೆದ ವರ್ಷದ ಯುಗಾದಿಯ ಶುಭ ಮಧ್ಯಾಹ್ನದಂದು. ಅಂದು ಎಲ್ಲರೂ ಹೋಳಿಗೆ ಊಟ ಮಾಡಿ ಮಧ್ಯಾಹ್ನದ ಸವಿ ನಿದ್ದೆಯಲ್ಲಿರಬೇಕಾದರೆ ನಾನು ಅವಾಗ ತಾನೇ ತರಿಸಿದ ತೇಜೋ ತುಂಗಭದ್ರಾ ಪುಸ್ತಕವನ್ನು ಹಿಡಿದು ಓದಲು ಟೆರೇಸಿನ ನೆರಳಲ್ಲಿ ಕೂತಿದ್ದೆ. ಹೀಗೆ ಓದಬೇಕೆಂದೇ ಮೊದಲೇ ಯೋಜಿಸಿ ಅದಕ್ಕಾಗಿಯಾದರೂ ಹೋಳಿಗೆ ಮಾಡಿ, ಎಲ್ಲರನ್ನೂ ನಿದ್ದೆಗೆ ಜಾರಿಸಿದ್ದೆ ಎಂದೇ ಹೇಳಬೇಕು. ಇತ್ತ ಹಂಪಮ್ಮ ಸತಿ ಪದ್ಧತಿಯ ಸಂಪ್ರದಾಯದಂತೆ ಕೈಗೆಲ್ಲ ಹಚ್ಚೆ ಹಾಕಿಸಿಕೊಂಡು ಸುಮಂಗಲೆಯರೊಡನೆ ತಾನು ಬಲಿಯಾಗಲು ಹೋಗುತ್ತಿದ್ದಾಗ (ಪುಸ್ತಕದಲ್ಲಿ ಬರುವ ದೃಶ್ಯ) ನನಗೆ ಜುಯ್ಯ ಎಂದು ಸದ್ದು ಕೇಳಿಸತೊಡಗಿತು! ಇದೇನು, ಲಿಸ್ಬನ್ ನಿಂದ ಹೊರಟ ಗ್ಯಾಬ್ರಿಯಲ್ ದೋಣಿಯಲ್ಲಿ ಸಮುದ್ರದ ಮೇಲೆ ತೇಲುತ್ತಿದ್ದಾಗಲೂ (ಇದು ಕೂಡ ಅದೇ ಪುಸ್ತಕದಲ್ಲಿ ಬರುವ ದೃಶ್ಯ) ಈ ತರಹ ಸದ್ದು ಕೇಳಿಸಿರಲಿಲ್ಲವಲ್ಲ ಎಂದು ಯೋಚಿಸಿದೆ! ತಲೆ ಎತ್ತಿ ನೋಡಿದಾಗ ಕಿಟಕಿಯ ಕೆಳ ಅಂಚಿನ ಮೂಲೆಯಲ್ಲಿ ಮಡಕೆಯ ಅಡಿಪಾಯ ಸಿದ್ಧವಾಗಿತ್ತು! ಹುಳುವು ನಿಧಾನಕ್ಕೆ ತನ್ನ ಗೂಡನ್ನು ಮಡಕೆಯ ತರಹ ರೂಪಿಸಲು ತನ್ನ ಕಾಲುಗಳು, ಬಾಯಿ ಮತ್ತು ನನ್ನ ಪ್ರಕಾರ ಅದರ ಮೀಸೆಗಳನ್ನು ಕೂಡ ಬಳಸುತ್ತಿತ್ತು! ಹಳದಿ ತಲೆ, ದೊಡ್ಡದಾದ ಕಪ್ಪು ಕಣ್ಣುಗಳು, ಒಂದೇ ಕಡ್ಡಿಯಂತಹ ಕಡು ಕಂದು ಬಣ್ಣದ ಹೊಟ್ಟೆ, ಮತ್ತೆ ಹಳದಿ ಬಣ್ಣದ ಹಿಂದಿನ ಭಾಗ ಇವಿಷ್ಟೇ ನನಗೆ ಗೋಚರಿಸಿದ್ದು. ಇನ್ನೂ ಹತ್ತಿರಕ್ಕೆ ಹೋಗಿ ನೋಡಿದರೆ ಎಲ್ಲಿ ಈ ಕುಂಬಾರ್ತಿ ಗೆ ಸಿಟ್ಟು ಬಂದು ನನ್ನನ್ನು ಕಚ್ಚಿ ಬಿಡಬಹುದೋ ಅಥವಾ ಮಡಕೆ ತ್ಯಜಿಸಿ ಹೋಗಿ ಬಿಟ್ಟರೆ ಏನು ಮಾಡುವುದೆಂದು ಯೋಚಿಸಿ ಸ್ವಲ್ಪ ದೂರದಿಂದಲೇ ಗಮನಿಸಿದೆ. ಆದರೆ ಅದನ್ನು ನೋಡಿದ್ದು ಅದೇ ಕೊನೆ. ಮತ್ತೆ ನೋಡಿದಾಗ ಸಿದ್ಧವಾದ ಮಡಕೆ ಅಷ್ಟೇ ಇತ್ತು. ನಾನೇ ಪುಸ್ತಕದಲ್ಲಿ ಮುಳುಗಿ ಹೋದೆನೋ ಅಥವಾ ಅದೇ ಸದ್ದಿಲ್ಲದೇ ಬಂದು ಮಡಕೆ ಕಟ್ಟಿತೋ ಎಂದು ನೆನಪಿಲ್ಲ ನನಗೆ! ಈಗ ಈ ಕುಂಬಾರ್ತಿ ಬಗ್ಗೆ ಓದಿದಾಗ ತಿಳಿದಿದ್ದೇನೆಂದರೆ ಇದು Delta pyriforme ಎಂಬುದರ ಒಂದು ಪ್ರಭೇದದ ಪಾಟರ್ ವಾಸ್ಪ್. ಇದರ ಮುಖ್ಯ ಕುಟುಂಬ Vespidae. Eumeninae ಎಂಬ ಸಹ ಕುಟುಂಬ ವರ್ಗಕ್ಕೆ ಸೇರಲ್ಪಡುತ್ತದೆ. ಇದು ಕೂಡ ತನ್ನ ಬೇಟೆಯನ್ನು ಪ್ಯಾರಲೈಜ್ ಗೊಳಿಸಿ ನಂತರ ಅದನ್ನು ತನ್ನ ಮರಿಗಾಗಿ ಗೂಡಿನಲ್ಲಿ ತಂದಿಡುತ್ತದೆ. ಕೆಲ ಸಂಶೋಧನೆಗಳ ಪ್ರಕಾರ ಒಂದು ಮಡಕೆಯಲ್ಲಿ ಅಂದರೆ ಗೂಡಿನಲ್ಲಿ 28 ಕಂಬಳಿಹುಳುಗಳು ಪತ್ತೆಯಾಗಿದ್ದೂ ಇದೆ! ನಾನು ಗಮನಿಸಿ ಹಾಗು ಓದಿದ್ದ ಪ್ರಕಾರ ಇದು ಜೇಡಗಳಿಗಿಂತ ಕಂಬಳಿಹುಳುಗಳನ್ನೇ ಮುಖ್ಯ ಆಹಾರವನ್ನಾಗಿಸಿಕೊಂಡಿದೆ. ತನ್ನ ಮೂರು ತಿಂಗಳುಗಳ ಜೀವಿತಾವಧಿಯಲ್ಲಿ ಸುಮಾರು ಇಪ್ಪತ್ತೈದು ಮಡಕೆಗಳನ್ನು ತಯಾರಿಸುತ್ತದೆ!

ಮೊದಲು ಒಬ್ಬ ಉತ್ತಮ ಕುಂಬಾರ್ತಿಯಂತೆ ಮಣ್ಣನ್ನು ಅಣಿಗೊಳಿಸಿ ಅದಕ್ಕೆ ಹತ್ತಿರದಲ್ಲಿನ ನೀರಿನ ಸೆಲೆಯಿಂದ ನೀರನ್ನು ಮಿಶ್ರಗೊಳಿಸಿ ತನ್ನ ಬಾಯಿಯ ಮೂಲಕ ಹದಗೊಳಿಸುತ್ತದೆ. ಹದಗೊಂಡ ಮಣ್ಣಿನ ಉಂಡೆಯನ್ನು ತನ್ನ ಮುಂಗಾಲು ಹಾಗು ಬಾಯಿಯ ಸಹಾಯದಿಂದ ಗೂಡು ಕಟ್ಟುವ ಜಾಗಕ್ಕೆ ತೆಗೆದುಕೊಂಡು ಬಂದು ತನ್ನ ಅಡಿಪಾಯವನ್ನು ಭದ್ರಗೊಳಿಸುತ್ತದೆ. ತದ ನಂತರ ನಾನು ಮೊದಲೇ ತಿಳಿಸಿದಂತೆ ಗೂಡನ್ನು ಕಟ್ಟುತ್ತಾ ಸಾಗುತ್ತದೆ. ಮಡಕೆ ಪೂರ್ತಿಗೊಂಡ ನಂತರ ಸ್ವಲ್ಪ ಹೊತ್ತು ಬಿಸಿಲಿನಲ್ಲಿ ಒಣಗಲು ಆಸ್ಪದ ಮಾಡಿ ಕೊಡುತ್ತದೆ. ಇದಾದ ಮೇಲೆ ಒಂದೇ ಒಂದು ಮೊಟ್ಟೆಯನ್ನು ಮಡಕೆಯಲ್ಲಿ ರೇಷ್ಮೆ ಎಳೆಯ ಮೂಲಕ ತೂಗು ಬಿಡುತ್ತದೆ. ಮೇಲೆ ವಿವರಿಸಿದಂತೆ ಕಂಬಳಿಹುಳುಗಳನ್ನು ತುಂಬಿದ ನಂತರ ಮಡಕೆಯ ಬಾಯನ್ನು ಮುಚ್ಚಿ ಬಿಡುತ್ತದೆ. ಇದು ಬೇರೆ ಬೇಟೆಗಾರ ಹುಳುಗಳಿಂದ ರಕ್ಷಣೆ ನೀಡುತ್ತಲ್ಲದೆ ಕೆಲ ಕಳ್ಳ ಕಣಜಗಳು ಅಥವಾ ಪರಾವಲಂಬಿ ಕಣಜಗಳು ತಮ್ಮ ಮೊಟ್ಟೆಯನ್ನು ಬೇರೆ ಕಣಜಗಳ ಗೂಡಿನಲ್ಲಿ ಇಡುವುದನ್ನು ಕೂಡ ತಪ್ಪಿಸುತ್ತದೆ! ಎಂಥ ಬುದ್ಧಿಶಾಲಿ ತಾಯಿಯಲ್ಲವೇ?

ನನಗಿನ್ನೂ ನಂಬಲಸಾಧ್ಯವಾದ ವಿಷಯವೆಂದರೆ ನಾನು ಬೆಂಗಳೂರಿಗೆ ಬಂದ ಮೇಲೆ ಯಾವುದೇ ಒಂದು ಮಡಕೆಯನ್ನು ಕೂಡ ನೋಡಿಲ್ಲ! mud dauber wasp ಹಾಗು ಇತರೆ ಹುಳುಗಳ ಮಣ್ಣಿನ ಗೂಡನ್ನು ನೋಡಿರುವೆನೇ ಹೊರತು ಕುಂಬಾರ್ತಿಯ ಮನೆ ಹುಡುಕಿದರೂ ಸಿಕ್ಕಿಲ್ಲ. ನಿಮಗೇನಾದರೂ ಇದರ ಬಗ್ಗೆ ಮಾಹಿತಿಯಿದ್ದಲ್ಲಿ ದಯವಿಟ್ಟು ತಿಳಿಸಿ. ಇದು ಗ್ಯಾರಂಟಿ ನನ್ನ ಮಗ ಕೇಳುವ ಪ್ರಶ್ನೆಗಳಲ್ಲಿ ಒಂದಾಗಿರುತ್ತದೆ!

ಲೇಖನ: ಅನುಪಮಾ ಕೆ. ಬೆಣಚಿನಮರ್ಡಿ

ಬೆಂಗಳೂರು ನಗರ ಜಿಲ್ಲೆ

ಅಲೆಮಾರಿಯ ಅನುಭವಗಳು – ೧೧

ಚುಮುಗುಡುವ ಚೂಪು ಚಳಿಯನ್ನ ಚುಚ್ಚಿಸಿಕೊಳ್ಳುತ್ತ ಬೈಕ್ ಏರಿದೆ. ಬೆಂಗಳೂರು, ತನ್ನ ನಸುಕಿನ ಕನಸುಗಳನ್ನು ಹಳದಿ ಬೀದಿ ದೀಪದ ಕೆಳಗೆ ಒಣಗಿಹಾಕಿ ನೇಸರನ ಹಾದಿ ಕಾಯುತ್ತಿತ್ತು. ಮಾಗಡಿ ರೋಡಿನ ಯಾವುದೋ ಒಂದು ಬ್ರಿಡ್ಜ್ ಮೇಲೆ ಬಂದು ನಿಂತಾಗ ಬೆಳಗಿನ ಆರುವರೆ. ನಮ್ಮ ಚಾರಣದ ಗೆಳೆಯರೆಲ್ಲ ತಮ್ಮ ತಮ್ಮ ಬೈಕ್ ಗಳ ಮೇಲೆ ಲಗೇಜುಗಳೊಂದಿಗೆ ಒಟ್ಟಾಗಿ ಸೇರಿ ಅಲ್ಲಿಂದ ಹೊರಟಾಗ 7 ಗಂಟೆ. ಬೆಂಗಳೂರಿನ ಪಡುವಣದಲ್ಲಿರುವ ಮಾಗಡಿ ರಸ್ತೆಯ ಮಾರ್ಗವಾಗಿ ಹೊರಟರೆ... ಆಹಾ! ಆಗಷ್ಟೆ ಒಂದು ಕಾಂಕ್ರೀಟ್ ಜಗತ್ತಿನಿಂದ ಹೊರಬಿದ್ದು ಮಲೆನಾಡಿನ ಹಸಿರಿಗೆ ಕಾಲಿಟ್ಟ ಸಂಭ್ರಮ. ಒಂದಷ್ಟು ಚಳಿಭರಿತ ಮುಂಜಾವಿನಲಿ, ಎಡಬಲದ ಹಸಿರನ್ನೇ ಆಸ್ವಾದಿಸುತ್ತಾ ಪ್ರಫುಲ್ಲಗೊಳ್ಳುತ್ತಿರುವ ಮನಸ್ಸು ಹರಿಬಿಟ್ಟು ಸಣ್ಣ ಸ್ಪೀಡಿನೊಂದಿಗೆ, ಪ್ರಪಂಚದಲ್ಲೇ ಅತ್ಯಂತ ದೊಡ್ಡ ಏಕಶಿಲಾ ಬೆಟ್ಟಕ್ಕೆ ಹಾಜರಿ ಹಾಕುವ ಕೌತುಕದಲ್ಲಿ ಬೆಳಗೊಂದನ್ನು ಆರಂಭಿಸಿದ್ದೆವು.

ಸಾವನದುರ್ಗದ ಪಾದ ತಲುಪಿದಾಗ ಬೆಳಗಿನ 9 ಗಂಟೆಯ ಆಸುಪಾಸು. ಬಿಸಿಲು ಏರಿ ಏರಿ ಬರುವ ಸಿಟ್ಟಿಗೆ ಮುಸುಕಿದ ಮಂಜು ಮುನಿಸಿ ಮಾಯವಾಗಿತ್ತು. ಒಟ್ಟಾಗಿ ಎಲ್ಲರೂ ಒಂದುಕಡೆ ಸೇರಿ ಸಣ್ಣ ಪರಿಚಯ ಮಾಡಿಕೊಂಡೆವು. ಹೊಸಬರೂ ಸಹ ಆತ್ಮೀಯರಾದರು. ಊಟ ಮಾಡಿ ಕೈ ತೊಳೆದು ಎಲ್ಲರೂ ಒಂದೊಂದು ದೊಡ್ಡ ಪ್ಲಾಸ್ಟಿಕ್ ಚೀಲಗಳನ್ನು ಕೈಗೆತ್ತಿಕೊಂಡು ಮೇಲೆ ಹೊರಟೆವು. ನಮ್ಮ ನಲವತ್ತು ಜನರ ಧ್ಯೇಯ ಅವತ್ತು ಪ್ಲಾಸ್ಟಿಕ್ ಕಸ ಮುಕ್ತ ಸಾವನದುರ್ಗ ಎಂಬುವುದಾಗಿತ್ತು. ಹಾಗಾಗಿ ಎಲ್ಲರೂ ಸ್ವಯಂ ಪ್ರೇರಿತರಾಗಿ ಸೇರಿದ್ದೆವು. ಅಲ್ಲಲ್ಲಿ ಕಟ್ಟಲು ಒಂದಷ್ಟು ನಾಮಫಲಕಗಳನ್ನೂ ಸಹ ರೆಡಿ ಮಾಡಿಕೊಂಡು ಹೋಗಿದ್ದೆವು.

ಈಗ ಬೆಟ್ಟದ ಪಾದದಿಂದ ಮೇಲೆ ಹತ್ತಲು ಶುರುವಿಟ್ಟುಕೊಂಡೆವು. ಬೆಟ್ಟದ ಮೇಲೆ ಕೋಟೆ ಇದೆ. ದೇವಸ್ಥಾನ ಇದೆ. ಗುಹೆಗಳೂ ಸಹ ಇವೆ ಅಂತ ಒಂದೊಂದೆ ಇತಿಹಾಸದ ಸುರುಳಿ ಬಿಚ್ಚಿಕೊಳ್ಳುತ್ತ ಗೆಳೆಯನೊಬ್ಬ ಜೊತೆಯಾದ. ಬೆಟ್ಟ ತುಂಬಾ ಭಯಂಕರ ಅನುಭವವನ್ನು ಹಾಸಿ ಮಲಗಿತ್ತು. ಅದನ್ನೇರುವ ಸಾಹಸ ಮಾಡುವುದೆಂದರೆ ವಿಚಿತ್ರ ಹುಚ್ಚು ಅಂತ ಒಳಗೊಳಗೆ ಮನಸ್ಸು ತಿವಿಯುತ್ತಲೆ ಇತ್ತು. ಬೆಟ್ಟದ ಮೈ ಮಡಚಿಕೊಂಡ ಇಕ್ಕೆಲಗಳ ಎದೆ ಏರಿ ಸಣ್ಣ ಸಣ್ಣ ಹೆಜ್ಜೆಗಳನ್ನೆ ಸಾಗುಹಾಕುತ್ತ ಕೋಟೆಯ ಮೊದಲ ಬಾಗಿಲು ಬಡೆಯುವಷ್ಟರಲ್ಲೆ ಕೈ ಕಾಲು ಮೈ ಎಲ್ಲವೂ ಭಯದ ಬೆವರಲ್ಲಿ ಬೆವೆತು ಹೋಗಿತ್ತು. ಒಂದಷ್ಟು ಹೊತ್ತು ಅಲ್ಲೆ ವಿಶ್ರಾಂತಿ ಪಡೆಯುತ್ತಾ ಗೆಳೆಯ ಹೇಳುವ ಕಥೆಗೆ ಕಿವಿಯಾದೆ.

ಸಾವನದುರ್ಗವು ಸ್ಥಳೀಯವಾಗಿ ಕರಿಗುಡ್ಡ (ಕಪ್ಪು ಬೆಟ್ಟ) ಮತ್ತು ಬಿಳಿಗುಡ್ಡ (ಬಿಳಿ ಬೆಟ್ಟ) ಎಂಬ ಹೆಸರು ಹೊಂದಿರುವ ಎರಡು ಬೆಟ್ಟಗಳಿಂದ ಪ್ರಚಲಿತವಾಗಿ ಹೆಸರುವಾಸಿಯಾಗಿದೆ. ಈ ಬೆಟ್ಟದ ಹೆಸರಿನ ಆರಂಭಿದ ದಾಖಲೆಯು ಕ್ರಿ.ಶ. 1340 ರಲ್ಲಿ ಮಾಡಬಲುವಿನ ಹೊಯ್ಸಳ ಮೂರನೆ ಬಲ್ಲಾಳನ ಅವಧಿಯಲ್ಲಿ ಕಂಡುಬಂದಿದೆ, ಇಲ್ಲಿ ಇದನ್ನು ಸಾವಂಡಿ ಎಂದು ಕರೆಯಲಾಗುತ್ತದೆ. ಈ ಹೆಸರು ಅಚ್ಯುತರಾಯನ ಅಧೀನದ ಮಾಗಡಿಯ ಗವರ್ನರ್ ಸಾಮಂತರಾಯನಿಗೆ ಸೇರಿದ್ದೆಂದು ಹೇಳಲಾದ ಸಾಮಂತದುರ್ಗದಿಂದ ಹುಟ್ಟಿಕೊಂಡಿದೆಯೆಂದು ಮತ್ತೊಂದು ಅವಲೋಕನವು ಸೂಚಿಸುತ್ತದೆ, ಆದರೂ ಇದನ್ನು ದೃಢೀಕರಿಸುವ ಯಾವುದೇ ಲಿಖಿತ ದಾಖಲೆಗಳಿಲ್ಲ.

© ಅಶ್ವಥ ಕೆ. ಎನ್.



ACROPOLIS OF DAULIA.

ಇದು ಮಾಗಡಿ ರಾಜರ ಎರಡನೇ ರಾಜಧಾನಿಯಾಗಿತ್ತು. 1638 ರಿಂದ 1728 ರವರೆಗೆ, ಮೈಸೂರು ಈ ಸ್ಥಳವನ್ನು ವಶಪಡಿಸಿಕೊಂಡಿತು ಮತ್ತು ದಳವಾಯಿ ದೇವರಾಜರು ನೆಲಪಟ್ಟಣದಲ್ಲಿ ಅರಮನೆಯನ್ನು ನಿರ್ಮಿಸಿಕೊಂಡು ಈ ಸ್ಥಳದಲ್ಲಿ ವಾಸಿಸಿದರು. 1791 ರಲ್ಲಿ ಲಾರ್ಡ್ ಕಾರ್ನ್‌ವಾಲಿಸ್ ಮೂರನೇ ಆಂಗ್ಲೋ-ಮೈಸೂರು ಯುದ್ಧದ ಸಂದರ್ಭದಲ್ಲಿ ಟಿಪ್ಪು ಸುಲ್ತಾನನ ಸೈನ್ಯದಿಂದ ಇದನ್ನು ವಶಪಡಿಸಿಕೊಂಡರು.

ರಾಬರ್ಟ್ ಹೋಮ್ ಆತನ ಸೆಲೆಕ್ಟ್ ವ್ಯೂವ್ಸ್ ಇನ್ ಮೈಸೂರಿನಲ್ಲಿ (1794) ಬೆಂಗಳೂರಿನಿಂದ ಬೆಟ್ಟದ ದೂರದ ದೃಶ್ಯಗಳನ್ನು ತೋರಿಸುತ್ತಾನೆ. ಆತ ಇದನ್ನು ಸಾವಿನದುರ್ಗ ಅಥವಾ ಫೋರ್ಟ್ ಆಫ್ ಡೆತ್ ಎಂದು ಕರೆದಿದ್ದಾನೆ.

ಇಷ್ಟುದ್ದದ ಇತಿಹಾಸವನ್ನು ಅವನು ಸುರುಳಿ ಸುರುಳಿಯಾಗಿ ಬಿಚ್ಚುತ್ತಿರುವಾಗಲೆ ನಮ್ಮ ಗಾರ್ಬೇಜ್ ಚೀಲ ಪ್ಲಾಸ್ಟಿಕ್ ಕಸವನ್ನು ತನ್ನೊಡಲೊಳಗೆ ತುಂಬಿಕೊಳ್ಳುತ್ತಿತ್ತು. ಸುಮಾರು ಜನ ಬೆಟ್ಟದ ಬುಡದಲ್ಲಿರುವ ಸಾವಂದಿ ವೀರಭದ್ರೇಶ್ವರ ಸ್ವಾಮಿ ಮತ್ತು ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಲು ಬರುತ್ತಾರೆ. ಬಂದವರು ಈ ಬೆಟ್ಟದ ಮೇಲಿನ ಕೋಟೆಯ ಮೊದಲ ಬಾಗಿಲಿನವರೆಗಾದರೂ ಹತ್ತುವ ಪ್ರಯತ್ನ ಮಾಡುತ್ತಾರೆ. ಬಂದವರು ತಿಂದು ಬಿಸಾಡುವ ಪ್ಲಾಸ್ಟಿಕ್ ಗಳು ಪ್ರಕೃತಿಯ ಮೇಲೆ ಬೀರುವ ಪರಿಣಾಮವನ್ನು ಯಾವತ್ತಿಗೂ ಸಹ ಬೀಸಾಡಿದವರು ಅವಲೋಕಿಸುವುದಿಲ್ಲ. ಜಗತ್ತಿನ ಅತಿ ದೊಡ್ಡ ಏಕಶಿಲಾ ಬೆಟ್ಟ ಎಂಬ ಹೆಗ್ಗಳಿಕೆಯನ್ನು ಪ್ರಕೃತಿ ತಾನಾಗೆ ಒಪ್ಪಿಸಿದ್ದರೂ ಸಹ ಪ್ರವಾಸೋದ್ಯಮ ಇಲಾಖೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕೂತಂತೆ ಸ್ಥಳಿಯ ಚಟುವಟಿಕೆಗಳ ಮೇಲೆ ನಿಗಾ ವಹಿಸದೆ ನಿರ್ಲಕ್ಷ್ಯದೆಡೆಗೆ ಮಗ್ಗುಲು ಬದಲಾಯಿಸಿ ಮಲಗಿದೆ.

© ನಾಗೇಶ್ ಓ. ಎಸ್.



ಬೆಟ್ಟದ ಮೇಲಿನ ಕೋಟೆಯ ಎರಡನೆ ಬಾಗಿಲನವರೆಗೂ ನಮ್ಮ ಪ್ಲಾಸ್ಟಿಕ್ ಆಯ್ದು ತುಂಬಿಕೊಳ್ಳುವ ಪ್ರಯಾಣ ಚಾಲ್ತಿಯಲ್ಲೆ ಇತ್ತು. ಅಲ್ಲಿಗೆ ಒಂದು ಚೀಲ ತುಂಬಿದ್ದಕ್ಕೆ ಆ ಚೀಲ ಅಲ್ಲೆ ಇಟ್ಟು ನಮ್ಮ ಚಾರಣ ಶುರು ಮಾಡಿದೆವು. ಈ ಹಾದಿ ಕತ್ತಿಯಂಚಿನ ದಾರಿಯಂತೆ ದುರ್ಗಮವಾಯಿತು. ಕೈಕಾಲುಗಳೆಲ್ಲಾ ಬೆವತುಹೋದವು. ಒಂದು ದೀರ್ಘ ದುರ್ಗಮವಾದ ಹಾದಿ ಕ್ರಮಿಸಿದ ನಂತರ ಒಂದಷ್ಟು ಹಸಿರು ಎದುರಾಯಿತು. ಎದೆ ಎತ್ತರದ ಬೆಟ್ಟವನ್ನು ಉಸಿರು ಬಿಗಿ ಹಿಡಿದು ಏರುತ್ತಲೆ ಆ ಹಸಿರು ತಲುಪಿದಾಗ ಅಲ್ಲಿ ಒಂದು ಪಾಳುಬಿದ್ದ ದೇವಾಲಯ ಮತ್ತು ಸುತ್ತ ಮುತ್ತಲೂ ಹಾಸಿ ಮಲಗಿದ ಮಟ್ಟಸ ಬೆಟ್ಟ. ದೇವಾಲಯದ ಎದುರು ನಿಸರ್ಗ ನಿರ್ಮಿತ ಮಳೆನೀರು ಶೇಖರಣದ ಎರಡು ದೊಡ್ಡ ಹೊಂಡಗಳು. ಇಲ್ಲಿಂದ ಇಡೀ ಸುತ್ತಮುತ್ತಲಿನ ದೂರದೂರದ ಬೆಟ್ಟ ಗುಡ್ಡಗಳು, ಊರುಗಳು, ಬೆಟ್ಟದ ಪಾದದಲ್ಲಿರುವ ದೇವಾಲಯಗಳು, ದೂರದ ಕಂದರಗಳು ಜೊತೆಗೆ ಬೆಟ್ಟದ ಹತ್ತಿರವಿರುವ ಅರ್ಕಾವತಿ ನದಿಯ ತಿಪ್ಪಗೊಂಡನಹಳ್ಳಿ ಜಲಾಶಯ ಎಲ್ಲವೂ ರಮ್ಯ ರಮಣೀಯವಾಗಿ ಕಾಣುತ್ತಿದ್ದವು. ಎಲ್ಲವನ್ನೂ ಜೋಡುಗಣ್ಣು ಬಿಚ್ಚಿ ಮೈಮನಸ್ಸು ಹರವಿ ನೋಡುತ್ತಾ ಒಂದರೆಕ್ಷಣ ಮೈ ಮರೆತು ಹೋಗಿಬಿಟ್ಟೆ.!

ಈಗ ಮತ್ತೆ ಇಲ್ಲಿಂದ ಬೆಟ್ಟದ ತುದಿಯಲ್ಲಿರುವ ನಂದಿ ದೇವಾಲಯದೆಡೆಗೆ ಚಾರಣ ಶುರು ಮಾಡಿದೆವು. ಈಗ ಒಂದಷ್ಟು ಬೆಚ್ಚನೆಯ ಮತ್ತು ತಣ್ಣನೆಯ ಗುಹೆಗಳು ಎದುರುಗೊಂಡವು. ಅಲ್ಲೊಂದಿಷ್ಟು ಪ್ಲಾಸ್ಟಿಕ್ ಆಯ್ದು ಗುಂಪೆ ಹಾಕಿ ಮೇಲೆ ಹತ್ತುತ್ತಾ ಹೋದೆವು. ಈ ಬೆಟ್ಟದ ಮೇಲೆ ಮತ್ತು ಆಸುಪಾಸಿನಲ್ಲಿ ಒಟ್ಟು 119 ಪ್ರಭೇದದ ಪೊದೆ ಸಸ್ಯ ಸಂಪತ್ತು ಹೊಂದಿದೆ ಎಂದು ಒಂದು ದಾಖಲೆ ಪ್ರಕಾರ ರುಜುವಾತಾಗಿದೆ. ಎಷ್ಟು ಚೆಂದದ ಹೂವುಗಳನ್ನು ಅರಳಿಸುವ ಮರಗಳನ್ನು ಈ ಕಲ್ಲು ಬೆಟ್ಟ ತನ್ನ ಎದೆಯಲ್ಲಿರಿಸಿಕೊಂಡಿದೆ ಎಂದರೆ ಸುಮಾರು ಹೊತ್ತು ಅವನ್ನ ನೋಡಿಕೊಳ್ಳುತ್ತಾ ಕುಳಿತುಬಿಡಬೇಕೆನಿಸಿಬಿಡುತ್ತೆ!

ಬೆಟ್ಟದ ತುತ್ತ ತುದಿಗೆ ತಲುಪಿದಾಗ ಮನಸ್ಸು ಸಾರ್ಥಕ ಭಾವ ತುಂಬಿಕೊಂಡು ನಗುತ್ತಿತ್ತು. ಬೆಟ್ಟದ ಸುತ್ತಮುತ್ತಲಿನ ವಾತಾವರಣ ಮತ್ತು ಬೆಟ್ಟದ ದುರ್ಗಮ ಅಂಚು ಹಾಗೂ ಕೆಳಗಿನ ಕಂದರ ಪಾತಾಳ ಎಲ್ಲವೂ ಜಾಗೃತ ಮನಸ್ಸನ್ನೊಮ್ಮೆ ಆಗಾಗ ಎಚ್ಚರಿಸುತ್ತಿತ್ತು. ಸ್ವಲ್ಪ ಹೊತ್ತು ಅಲ್ಲೇ ಕಾಲ ಕಳೆದು ಕೆಳಗಿಳಿಯಲು ಶುರುಮಾಡಿದೆವು. ಆಗಲೆ ನೋಡಿ ಹೋಗಿದ್ದ ಪಾಳು ಬಿದ್ದಿರುವ ದೇವಾಲಯದ ಎದುರು ಕೂತು ಎಲ್ಲರೂ ಊಟ ಮುಗಿಸಿದೆವು. ಅಲ್ಲಿ ಹದ್ದುಗಳು ಓಡಾಟ ಜಾಸ್ತಿ ಆಗಿತ್ತು. ತುಂಬಾ ಕ್ಲಿಯರ್ ಆಗಿ ನಾವು ಹದ್ದಿನ ಚಲನವಲನಗಳನ್ನು ಬೆಟ್ಟದ ಈ ಸ್ಥಳದಿಂದ ನೋಡಬಹುದು. ಭರ್ತಿ ಊಟದ ನಂತರ ಅಲ್ಲಲ್ಲಿ ಪ್ಲಾಸ್ಟಿಕ್ ಕಸ ತುಂಬಿಸಿಟ್ಟ ಭರ್ತಿ ಚೀಲಗಳನ್ನು ನಾಜೂಕಾಗಿ ಅಲ್ಲಿಂದ ಕೆಳಗೆ ತಳ್ಳಿಕೊಂಡು, ಎತ್ತಿಕೊಂಡು ಒಂದೊಂದು ಕಡೆ ಉರುಳಿಸಿಕೊಳ್ಳುತ್ತಾ ಕೆಳಗಿಳಿದು ಬಂದೆವು.

ಪೂರ್ತಿ ಕೆಳಗಿಳಿದಾಗ ಸಂಜೆ ನಾಲ್ಕುವರೆ ಸಮಯ. ಒಟ್ಟು 40 ರಿಂದ 50 ಚೀಲಗಳು ಒಟ್ಟುಗೂಡಿಸಿದೆವು. ಒಂದು ಚೀಲ 10 ರಿಂದ 15 ಕೆಜಿ ತೂಕ ತೂಗಿದರೂ ಸಹ ಒಟ್ಟು 500 ಕೆಜಿಯಷ್ಟು ಪ್ಲಾಸ್ಟಿಕ್ ಅನ್ನು ನಾವು ಮುಕ್ತಗೊಳಿಸಿದ್ದೇವೆ ಎನ್ನುವ ಸಮಾಧಾನ ಇತ್ತು. ಇದು ಸಾವನದುರ್ಗದ ಒಂದು ದಿನದಲ್ಲಿ ನಮಗಾದಷ್ಟು ಮಟ್ಟಿಗೆ ಮಾಡಿದ ಕೆಲಸ ಅಷ್ಟೆ. ಇನ್ನೂ ವಾರಕ್ಕಾಗುವಷ್ಟು ಭರ್ತಿ ಕಸವನ್ನು ನಮ್ಮ ಪೀಳಿಗೆ ಅಲ್ಲಿ ಪೇರಿಸಿಟ್ಟಿದ್ದು ದುರಂತ. ಆ ಇಡೀ ಕಸವನ್ನು ನೀವೆ ಮಾರಿಕೊಳ್ಳಬಹುದು ಅಂತ ಬೆಟ್ಟದ ಬಾಗಿಲಿನ ಹತ್ತಿರದ ಗೂಡಂಗಡಿಯವನಿಗೆ ವರ್ಗಾಯಿಸಿ. ಅಲ್ಲಿಂದ ನಾವುಗಳೆಲ್ಲಾ ಬೆಂಗಳೂರಿನೆಡೆಗೆ ಪಯಣ ಶುರುಮಾಡಿದೆವು. ಬೆನ್ನ ಹಿಂದೆ ನೇಸರ ಬೆನ್ನುತಟ್ಟಿದಂತೆ ಭಾಸವಾಗಿ ಒಂದಷ್ಟು ಹೊತ್ತು ನಿಂತು ಸೂರ್ಯಾಸ್ತ ಆಗುವವರೆಗೂ ಬೆಟ್ಟದಂಚನ್ನೆ ನೋಡುತ್ತಾ ಕಾಲಾಹರಣ ಮಾಡಿದೆವು. ಸಂಜೆ ಸೂರ್ಯ ಸರಿದಾಗ ಮತ್ತೆ ಚಳಿ ಒಕ್ಕರಸಿಕೊಂಡು ಬಂತು. ಮತ್ತದೆ ಹಸಿರು ಮಂಜು ಎದುರುಗೊಳ್ಳುತ್ತಾ ಬೆಂಗಳೂರಿಗೆ ದಾರಿ ತೋರಿಸುವಾಗ ಸಾವನದುರ್ಗದಿಂದ ನಮ್ಮ ಬೈಕಿನ ಚಕ್ರಗಳು ಬಹಳ ದೂರ ಬಂದುಬಿಟ್ಟಿದ್ದವು.

ಲೇಖನ: ಮೌನೇಶ ಕನಸುಗಾರ

ಕಲ್ಬುರ್ಗಿ ಜಿಲ್ಲೆ

ವಿವಿ ಅಂಕಣ

ನಾಯಕನೋ..? ಏಕಾಂಗಿಯೋ..?

ಹತ್ತನೇ ತರಗತಿಯಲ್ಲಿ ಚೆನ್ನಾಗಿಯೇ ಅಂಕಗಳು ಬಂದಿದ್ದವು. ಪಿ. ಯು. ಸಿ. ಗೆ ಹತ್ತಿರದ ಒಂದು ಕಾಲೇಜಿನಲ್ಲಿ ಸೇರಲು ಹೊರಟೆ. ಅದೊಂದು ಕ್ರೈಸ್ತ ಕಾಲೇಜಾದ್ದರಿಂದ ಅಲ್ಲಿನ ಪ್ರಾಂಶುಪಾಲರು ಒಬ್ಬ ಫಾದರ್ ಆಗಿದ್ದರು. ಫಾದರ್ ರ ಪ್ರಕಾರ ಹತ್ತನೇ ತರಗತಿಯಲ್ಲಿ ಸ್ವಲ್ಪ ಅಂಕಗಳು ಬಂದಿದ್ದರಿಂದ ಅವರ ಸಲಹೆ ಹೀಗಿತ್ತು. ವಿಜ್ಞಾನ ವಿಷಯ ತೆಗೆದುಕೊಂಡಿರುವೆ, ಆಟೋಟಗಳ ಮೇಲೆ ಸಮಯ ವ್ಯರ್ಥ ಮಾಡದೆ ಗಮನ ಹೆಚ್ಚಾಗಿ ವಿಷಯಾಭ್ಯಾಸದ ಮೇಲಿಡಬೇಕು ಎಂದು. ಆದರೆ ನನಗೆ ಆಟ-ಪಾಠ ಎರಡೂ ಮುಖ್ಯವಾಗಿದ್ದವು. ಏಕೆಂದರೆ ದೈಹಿಕವಾಗಿ ದೃಢವಾಗಿರುವುದು ಮಾನಸಿಕ ಏಕಾಗ್ರತೆಗೆ ಬಹು ಸಹಕಾರಿಯಾದುದು. ಆ ಏಕಾಗ್ರತೆ ಮತ್ತು ಆಸಕ್ತಿಯಿಂದಲೇ ಬೇರೆ ಎಲ್ಲಾ ವಿಷಯ ಅಭ್ಯಾಸಗಳು ಸುಲಭವಾಗುವುದು ಅಲ್ಲವೇ? ತಕ್ಷಣಕ್ಕೆ ಸುಮ್ಮನಿದ್ದು ಆಮೇಲೆ ನೋಡಿಕೊಳ್ಳೋಣ ಎಂದು ಫಾದರ್ ಎದುರು 'ಮೌನಮ್ ಸಮ್ಮತಿ ಲಕ್ಷಣಮ್' ನಿಯಮ ಪಾಲಿಸಿದೆ. ನಂತರ ಕಾಲೇಜಿಗೆ ಸೇರಲಾಗಿ ತರಗತಿಗಳು ಶುರುವಾಗಿ ಈಗ ತರಗತಿಗೆ ಒಬ್ಬ ನಾಯಕ ಬೇಕಿತ್ತು. ಕೇವಲ ಹದಿನೈದು ಜನರಿದ್ದ ತರಗತಿಯಲ್ಲಿ ಬಹುಶಃ ಅಂಕದ ಆಧಾರದ ಮೇಲೆ ನನ್ನನ್ನು ತರಗತಿಯ ನಾಯಕನನ್ನಾಗಿ ಮಾಡಿದರು. ನಾನೂ ಸಮ್ಮತಿಸಿದೆ. ಅದಕ್ಕೂ ಕಾರಣವಿದೆ. ಕೇವಲ ಭೌತಶಾಸ್ತ್ರ, ಜೀವಶಾಸ್ತ್ರ, ಗಣಿತ, ರಸಾಯನ ಶಾಸ್ತ್ರಗಳಿಗೇ ಆದ್ಯತೆ ನೀಡಿ ನಮ್ಮ ದೈಹಿಕ ಶಿಕ್ಷಣ ವಿಷಯವಾದ ಆಟಕ್ಕಾಗಿ ನನಗೆ ನೆನಪಿರುವ ಹಾಗೆ ವಾರದಲ್ಲಿ ಕೇವಲ ಒಂದೇ ಒಂದು ಅವಧಿಯಿತ್ತು. ನಮ್ಮ ದುರ್ದೈವವೆಂದರೆ ಆ ತರಗತಿಯನ್ನೂ ಈ ಮೇಲೆ

ಹೇಳಿರುವ ಯಾವುದೋ ಒಂದು ವಿಷಯದ ಅಧ್ಯಾಪಕರೇ ತೆಗೆದುಕೊಳ್ಳುತ್ತಿದ್ದರು. ಹೀಗೆ ನಡೆಯುವುದನ್ನು ನೋಡಿ ತಾಳಲಾರದೆ ತರಗತಿಯ ನಾಯಕನಾದ ನಾನು ಒಂದು ನಿರ್ಧಾರ ತೆಗೆದುಕೊಳ್ಳಬೇಕಿತ್ತು. ತೆಗೆದುಕೊಂಡೆ. ಅದೇನೆಂದರೆ ಉಚಿತ ತರಗತಿಯೆಂದು ಭಾವಿಸಿ ಅಧ್ಯಾಪಕರು ತರಗತಿಗೆ ಧಾವಿಸುವುದರ ಒಳಗೇ ತರಗತಿಯಲ್ಲಿದ್ದ ಸ್ನೇಹಿತರೆಲ್ಲರನ್ನೂ ಸಾಲು ಮಾಡಿಸಿ ಸೀದಾ ಆಟದ ಮೈದಾನಕ್ಕೆ ಕರೆದುಕೊಂಡು ಹೋಗಿಬಿಡುತ್ತಿದ್ದೆ. ನಂತರ ಅಧ್ಯಾಪಕರು ಬಂದರೆ ಖಾಲಿ ತರಗತಿಯನ್ನು ನೋಡಿ ಕೆಲವರು ಹೊರಟುಹೋದರೆ ಕೆಲವರು ಬರಲು ಹೇಳಿಕಳುಹಿಸುತ್ತಿದ್ದರು. ಆದರೆ ನಾವು ವಾಪಸ್ಸು ತರಗತಿಗೆ ಹೋಗುತ್ತಿದ್ದ ವೇಗ ಮತ್ತು ಸಮಯವನ್ನು ಗಮನಿಸಿದ ಅಧ್ಯಾಪಕರು ಕ್ರಮೇಣ ಆಟದ ಅವಧಿಯನ್ನು ತೆಗೆದುಕೊಳ್ಳುವುದು ಕಡಿಮೆ ಮಾಡಿದರು. ಇದೋ ನಾಯಕನಾದರೆ ಇಂತಹ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬಹುದಿತ್ತು. ಆದರೆ ಕಾಲ ಸರಿದಂತೆ ಇದೇ ನಾಯಕತ್ವದ ಸಲುವಾಗಿ ಹೆಚ್ಚೆಚ್ಚು ಸಮಯವನ್ನು ನನ್ನ ಸ್ನೇಹಿತರ ಜೊತೆಗೆ ಕಳೆಯಲಾಗುತ್ತಿರಲಿಲ್ಲ. ಆದ ಕಾರಣ ಎರಡನೇ ವರ್ಷದಲ್ಲಿ ನಾಯಕತ್ವವನ್ನು ನನ್ನ ಸ್ನೇಹಿತನಿಗೇ ಕೊಟ್ಟು ನಾನು ಸ್ವಲ್ಪ ಸ್ವತಂತ್ರನಾದೆ. ಹೀಗೆ ನಾಯಕತ್ವವನ್ನು ಸಾಧಿಸಲು ಅವಕಾಶ, ಗುಣ, ಸಮಯ ಸಂದರ್ಭ ಹೀಗೆ ಹಲವು ಕಾರಣಗಳು ನಿರ್ಧರಿಸುತ್ತದೆ. ಆದರೆ ಅಮೇರಿಕಾದ ಯೆಲ್ಲೋ ಸ್ಟೋನ್ ನ್ಯಾಷನಲ್ ಪಾರ್ಕಿನಲ್ಲಿ ಕಂಡುಬರುವ ಬೂದು ತೋಳಗಳಿಗೆ ಈ ಗುಣವನ್ನು ಒಂದು ಪರಾವಲಂಬಿ ಏಕಕೋಶ ಜೀವಿ ನಿರ್ಧರಿಸುತ್ತಿದೆ ಎಂದು ಹೇಳುತ್ತಿದೆ ಈ ಸಂಶೋಧನೆ.

© TODOREAN GABRIEL_ISTOCK_GETTY

ಯೆಲ್ಲೋ ಸ್ಟೋನ್ ನ್ಯಾಷನಲ್ ಪಾರ್ಕಿನಲ್ಲಿ ನಡೆದ ಈ ಸಂಶೋಧನೆಯ ಪ್ರಕಾರ *ಟೋಕ್ಸೋಪ್ಲಾಸ್ಮಾ ಗೊಂಡಿ* ಎಂದು ಕರೆಯಲ್ಪಡುವ ಒಂದು ಏಕಕೋಶ ಪರಾವಲಂಬಿಯೇ ಇದಕ್ಕೆ ಕಾರಣ. ಸಂಶೋಧನೆಯ ಸಾರ ಹೀಗಿದೆ. ಈ ಬೂದು ತೋಳಗಳಲ್ಲಿ ಟಿ. ಗೊಂಡಿ ಪರಾವಲಂಬಿಯಿಂದ ಸೋಂಕಿಗೆ ಒಳಗಾದವು ಸೋಂಕಿಗೆ ಒಳಗಾಗದ ತೋಳಗಳಿಗಿಂತ ಹೆಚ್ಚು ಧೈರ್ಯಶಾಲಿ-ನಿರ್ಧಾರಗಳನ್ನು ದೈನಂದಿನ ಜೀವನಶೈಲಿಯಲ್ಲಿ ತೆಗೆದುಕೊಳ್ಳುತ್ತಿದ್ದವು. ಇದರ ಪರಿಣಾಮ ಸೋಂಕಿಗೆ ಒಳಗಾದ ಆ ತೋಳ ಒಂದಾ ತನ್ನ ಗುಂಪಿಗೆ ನಾಯಕನಾಗುತ್ತಿತ್ತು. ಇಲ್ಲವೇ ಗುಂಪನ್ನು ತೊರೆದು ಏಕಾಂಗಿಯಾಗುತ್ತಿತ್ತು. ಇದರಿಂದ ಅವುಗಳಿಗೆ ಉಪಯೋಗವೂ ಹೌದು, ಅಪಾಯವೂ ಹೌದು.

© RUSSELL BURDEN_PHOTODISC_GETTY

ಗೊಂಬೆ ಆಡಿಸುವವನನ್ನು ಹೋಲುವ ಈ ಪರಾವಲಂಬಿ ಏಕಕೋಶ ಜೀವಿಗೆ ತಾನು ಹೊಕ್ಕ ಪ್ರಾಣಿಗಳ ನಡವಳಿಕೆಯನ್ನು ಬದಲಾಯಿಸುವ ಗುಣವಿದೆ ಎಂಬ ಉದಾಹರಣೆಗಳಿವೆ. ಅದರಲ್ಲಿ ಒಂದೆಂದರೆ, ಈ ಪರಾವಲಂಬಿ ಇಲಿಗಳ ದೇಹವನ್ನು ಸೇರಿ ನಂತರ ಇಲಿಗಳಿಗೆ ಬೆಕ್ಕಿನ ಮೇಲೆ ಸಾಮಾನ್ಯವಾಗಿ ಅಥವಾ ತನ್ನ ಪ್ರವೃತ್ತಿಯಾದ ಹೆದರಿಕೆಯನ್ನು ಇಲ್ಲದ ಹಾಗೆ ಮಾಡಿಬಿಡುತ್ತದೆ. ಇದರಿಂದ ಬೆಕ್ಕು ಎದುರಿಗೆ ಬಂದರೂ ಹೆದರದೇ ನಿಂತ ಇಲಿಗಳನ್ನು ಬೆಕ್ಕು ನಿರಾಯಾಸವಾಗಿ ಗುಳುಂ ಮಾಡುತ್ತದೆ. ಇದರಿಂದ ಯಾರಿಗೇನು ಉಪಯೋಗ? ಒಳ್ಳೆಯ ಪ್ರಶ್ನೆ. ಹೀಗೆ ಮಾಡುವುದರಿಂದ ಅದೇ ಪರಾವಲಂಬಿಗೇ ಉಪಯೋಗವಿದೆ. ಹೇಗೆಂದುಕೊಂಡಿರಿ, ಸೋಂಕಿತ ಇಲಿಯನ್ನು ತಿಂದ ಬೆಕ್ಕಿನ ಚಿಕ್ಕ ಕರುಳಿನಲ್ಲೇ ತನ್ನ ಬಿಡಾರವನ್ನು ಹೂಡಿ ತನ್ನ ಜೀವನವನ್ನು ನಿರಾಯಾಸವಾಗಿ ನಡೆಸುತ್ತದೆ.

ಅದೇ ರೀತಿ ನಮ್ಮ ಬೂದು ತೋಳಗಳನ್ನೂ ಬಾಧಿಸುವ ಈ ಪರಾವಲಂಬಿ ಅವುಗಳ ಪ್ರವೃತ್ತಿಯಲ್ಲೇನಾದರೂ ಬದಲಾವಣೆ ತಂದೀತೆ ಎಂದು ಸಂಶೋಧಿಸಲು ಶುರು ಮಾಡಿದರು. ಅದಕ್ಕಾಗಿ 229 ತೋಳಗಳ 26 ವರ್ಷದ ಮಾಹಿತಿಯನ್ನು ಕಲೆ ಹಾಕಿದರು. ಆ ಮಾಹಿತಿಯಲ್ಲಿ ತೋಳಗಳ ರಕ್ತ ಪರೀಕ್ಷೆಗಳು ಮತ್ತು ವಿಜ್ಞಾನಿಗಳು ಗಮನಿಸಿದ ಅವುಗಳ ನಡವಳಿಕೆಯ ಅಧ್ಯಯನಗಳು ಇದ್ದವು. ಮೊದಲಿಗೆ ತೋಳಗಳಲ್ಲಿ ಯಾವುದು ಸೋಂಕಿತ ಮತ್ತು ಯಾವುದು ಅಲ್ಲ ಎಂದು ತಿಳಿಯಬೇಕಿತ್ತು. ಅದು ಸುಲಭ ಅದಕ್ಕಾಗಿ ಎಲ್ಲಾ ತೋಳಗಳಲ್ಲಿ ಟಿ. ಗೊಂಡಿ ಪರಾವಲಂಬಿಗೆ ತೋಳದಲ್ಲಿ ಉತ್ಪಾದನೆ ಆಗುವ ಪ್ರತಿಕಾಯ (antibody) ಗಳು ಇವೆಯೇ ಎಂದು ಪರೀಕ್ಷಿಸಿದರೆ ಆಯಿತು. ತಂದೆ, ತಾಯಿ ಮತ್ತು ತನ್ನ ಮಕ್ಕಳಿರುವ ಒಂದು ತೋಳದ ಗುಂಪಿನಲ್ಲಿ ಯಾವುದು ನಾಯಕ ಅಥವಾ ಯಾವ ತೋಳ ಗುಂಪನ್ನು ಬಿಟ್ಟು ಏಕಾಂಗಿಯಾಗಿದೆ ಎಂಬುದನ್ನೂ ಹಾಗೇ ಗುರುತಿಸಿಕೊಳ್ಳಲಾಯಿತು. ಏಕೆಂದರೆ ಹೀಗೆ ಗುಂಪಿನ ನಾಯಕನಾಗುವುದು ಮತ್ತು ಏಕಾಂಗಿಯಾಗುವುದು ಇವೆರಡೂ ಅಪಾಯಕಾರಿ

ನಿರ್ಧಾರಗಳು. ಕಾರಣ ಏಕಾಂಗಿಯಾದರೆ ಬೇಟೆ ಆಡುವುದು ಕಷ್ಟವಾಗುತ್ತದೆ. ಬೇಟೆ ಇಲ್ಲದ ತೋಳ ಹಸಿವಿನಿಂದ ಸಾಯಬಹುದು. ಹಾಗೆಯೇ ನಾಯಕನಾಗಬೇಕೆಂದರೆ ಬೇರೆ ತೋಳಗಳ ಜೊತೆ ಸೆಣಸಾಡಬೇಕಾಗುತ್ತದೆ. ಹೀಗೆ ಸೆಣಸಾಡುವಾಗ ಮರಣ ಹೊಂದುವ ಸಾಧ್ಯತೆಗಳೂ ಇವೆ. ಆದರೆ ಈ ಸೋಂಕಿತ ತೋಳಗಳು ಸೋಂಕು ತಗುಲದ ತೋಳಗಳಿಗಿಂತ 11 ಪಟ್ಟು ಹೆಚ್ಚು ಏಕಾಂಗಿಯಾಗಿ ತೆರಳುವ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದರೆ, 46 ಪಟ್ಟು ಸೋಂಕಿತ ತೋಳಗಳ ನಿರ್ಧಾರಗಳು ತಾನು ನಾಯಕನಾಗಲು ತೆಗೆದುಕೊಳ್ಳುತ್ತಿದ್ದವಂತೆ. ಇದರಿಂದ ಸ್ಪಷ್ಟವಾಗುವ ವಿಷಯವೆಂದರೆ ಸೋಂಕಿತ ತೋಳಗಳು ಉಳಿದವುಗಳಿಗಿಂದ ಹೆಚ್ಚು ಧೈರ್ಯಶಾಲಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದವು ಎಂದು.

ಈ ಸಂಶೋಧನೆಯ ಒಂದೇ ಒಂದು ನ್ಯೂನ್ಯತೆಯೆಂದರೆ ಈಗ ನಡೆದ ಸಂಶೋಧನೆ ಬಂಧಿಸಿಟ್ಟ ತೋಳಗಳ ಮೇಲೆ ನಡೆಸಿದ್ದು. ಇದೇ ಪರಿಣಾಮ ಸ್ವಚ್ಛಂದವಾಗಿ ಕಾಡಿನಲ್ಲಿ ತಿರುಗುವ ವನ್ಯ ತೋಳಗಳಿಗೂ ಅನ್ವಯಿಸುವುದೇ ಎಂದು ಕೇಳಿದರೆ ಸಧ್ಯಕ್ಕೆ ಸ್ಪಷ್ಟ ಉತ್ತರವಿಲ್ಲ!

ಹಾಗೆ ನೋಡಿದರೆ ಯಾವುದನ್ನು ನಾವು ಸ್ಪಷ್ಟ ಅಥವಾ ನಿರ್ದಿಷ್ಟ ಎಂದು ನಂಬಿದ್ದೆವೋ ಅವುಗಳಲ್ಲಿ ಈಗಾಗಲೇ ಹಲವು ನಮಗೆ ಅರಿವಿಗೆ ಕಾಣದ ಅಸ್ಪಷ್ಟದ ಹಾದಿಯಲ್ಲಿ ನಿಂತಂತಿವೆ. ಯಾವುದು ಇಂದು ಸ್ಪಷ್ಟವೋ ಅವು ಮುಂದೆ ಅಸ್ಪಷ್ಟವೂ, ಈಗ ಯಾವುದು ಕ್ಲಿಷ್ಟವೋ ಅದು ಮುಂದೆ ಸ್ಪಷ್ಟವಾಗುವುದಿಲ್ಲ ಎಂಬುದಕ್ಕೆ ಉತ್ತರವಿದೆಯೇನು?

ಎಲ್ಲವೂ ಸ್ಪಷ್ಟವೆನಿಸುವಷ್ಟೇ ಅಸ್ಪಷ್ಟ ಎನ್ನುವುದನ್ನು ಜೀರ್ಣಿಸಿಕೊಳ್ಳುವುದೇ ನಮ್ಮ ನಿಯಮಿತ ಮೆದುಳಿಗೆ ಈಗಿರುವ ಕಷ್ಟ! ಈ ಅಸ್ಪಷ್ಟತೆಯ ಸ್ಪಷ್ಟತೆಯಲ್ಲಿ ನೀನು ನಾಯಕನೋ..? ಏಕಾಂಗಿಯೋ..?

ಮೂಲ ಲೇಖನ: www.snexplores.org

ಲೇಖನ: **ಜೈಕುಮಾರ್ ಆರ್.**
ಡಬ್ಲ್ಯೂ. ಸಿ. ಜಿ. ಬೆಂಗಳೂರು ನಗರ ಜಿಲ್ಲೆ

© ಸವಿತ ಎಸ್.

ಅರಣ್ಯ ರಕ್ಷಕ

ನೀನೊಬ್ಬ ಅರಣ್ಯ ರಕ್ಷಕ
ಪರಿಸರದ ಪರಿಚಾರಕ

ಶಿಸ್ತು - ಸಂಯಮವೇ ನಿನಗಾಧರ
ನಿಸ್ವಾರ್ಥ ಸೇವೆಗೆ ನಿನಗೆ ಸಾಟಿಯಾರ

ಹಗಲು-ರಾತ್ರಿಗಳ ವ್ಯತ್ಯಾಸ ನೀ ನೋಡಿಲ್ಲ
ಹಬ್ಬ-ಹರಿದಿನಗಳ ರುಚಿಯು ನೀ ಕಂಡಿಲ್ಲ

ಸದಾ ಪರಿಸರ ರಕ್ಷಣೆಯು ನಿನ್ನ ಹಠ,
ಆಪತ್ತಿನಲ್ಲಿ ಹೆದರದೆ ಮುನ್ನುಗುವ ನಟ

ನೋಡುಗರಿಗೆ ನಿನ್ನದೊಂದು ಕಠೋರ ಸ್ವಭಾವ
ಆದರೆ ಅನಿವಾರ್ಯ, ಪರಿಸರ ರಕ್ಷಣೆಗೆ ಈ ಭಾವ

ಸದಾ ಶ್ರಮಿಸುವ ನಿನ್ನನ್ನು ದೂರುವರು ಜನರು
ಆದರೂ ಬೆಳೆ ನಾಶವಾದಾಗ ನಿನ್ನನ್ನು ನೆನೆಸುವವರು

ನೀನೊಬ್ಬ ಹಸಿರಿನ ಅರಣ್ಯ ಸೇವಕ
ಸಮಾಜದಲ್ಲಿ ಪರಿಸರ ಸಂರಕ್ಷಣೆ ಮಾಡುವ ಧೀಮಂತ ನಾಯಕ...

ಲಿಂಗರಾಜ ಎಮ್.
ಗದಗ ಜಿಲ್ಲೆ

ಪ್ರಕೃತಿ ಬಿಂಬ

ಬೂದು ಬಣ್ಣದ ಲಂಗೂರ್ © **ಗುರುಪ್ರಸಾದ್ ಕೆ. ಆರ್.**

ಭಾರತೀಯ ಉಪಖಂಡದಲ್ಲಿ, ಭೂತಾನ್ ಮತ್ತು ನೇಪಾಳದ ಉಷ್ಣವಲಯದ ಮಳೆಕಾಡುಗಳು, ಒಣ ಎಲೆಯುದುರುವ ಕಾಡುಗಳು, ತೋಪುಗಳು, ಉದ್ಯಾವನಗಳು ಮತ್ತು ಪೊದೆಗಳಲ್ಲಿ ಈ ಬೂದು ಬಣ್ಣದ ಲಂಗೂರ್ ಗಳು ಕಂಡುಬರುತ್ತವೆ.

ಸೆರ್ಕೋಪಿಥೆಸಿಡೆ (Cercopithecidae) ಕುಟುಂಬಕ್ಕೆ ಸೇರುವ ಈ ಸಸ್ತನಿಯನ್ನು ವೈಜ್ಞಾನಿಕವಾಗಿ ಸಿಮಿಯಾ ಎಂಟೆಲಸ್ (Simia entellus) ಎಂದು ಕರೆಯಲಾಗುತ್ತದೆ. ಬೂದು ಬಣ್ಣದ ತುಪ್ಪಳವಿದ್ದು, ಕಪ್ಪು ಮುಖಗಳು, ಕಿವಿಗಳು, ಬೆರಳುಗಳು ಮತ್ತು ಕಾಲ್ಬೆರಳುಗಳನ್ನು ಹೊಂದಿರುತ್ತವೆ. ಬಾಲವು ದೇಹಕ್ಕಿಂತ ಉದ್ದವಾಗಿದ್ದು, ಮರಗಳ ನಡುವೆ ಹಾರಲು ಸಹಾಯಕವಾಗುತ್ತದೆ. ಸಸ್ಯಾಹಾರಿಯಾದ ಇವುಗಳು ಎಲೆ, ಹಣ್ಣು, ಚಿಗುರು, ಬೇರು, ಹುಲ್ಲು, ಜರೀಗಿಡ, ಪಾಚಿ ಮತ್ತು ಕಲ್ಲುಹೂವುಗಳನ್ನು ಸೇವಿಸುತ್ತವೆ. ಜಿಂಕೆಗಳು ಈ ಲಂಗೂರ್ ಗಳು ಎಸೆಯುವ ಆಹಾರದ ಮೇಲೂ ಅವಲಂಬಿತವಾಗಿರುತ್ತವೆ. ಹಾಗಾಗಿ, ಇವೆರಡೂ ಪ್ರಾಣಿಗಳು ಪರಸ್ಪರ ಎಚ್ಚರಿಕೆ ಕರೆಗಳನ್ನು ನೀಡಿ ಪರಭಕ್ಷಕದಿಂದ ಪಾರಾಗುವುದು ವಿಶೇಷವಾಗಿದೆ.

ನರಿ © ಗುರುಪ್ರಸಾದ್ ಕೆ. ಆರ್.

ಭಾರತದಾದ್ಯಂತ ವ್ಯಾಪಕವಾಗಿ ಕಾಣಸಿಗುವ ಈ ನರಿಗಳು, ಹಿಮಾಲಯದ ತಪ್ಪಲಿನಿಂದ, ಪಶ್ಚಿಮ ಘಟ್ಟಗಳವರೆಗೆ ಒಣ ಎಲೆಯುದುರುವ ಕಾಡುಗಳು, ಅರೆ-ಶುಷ್ಕ ಪ್ರದೇಶಗಳು, ಕೃಷಿ ಭೂಮಿಗಳು ಮತ್ತು ಮಾನವರ ಆವಾಸಸ್ಥಾನಗಳಿರುವೆಡೆ ಕಂಡುಬರುತ್ತವೆ. ಕ್ಯಾನಿಡೇ (Canidae) ಕುಟುಂಬಕ್ಕೆ ಸೇರುವ ಇವನ್ನು ವೈಜ್ಞಾನಿಕವಾಗಿ ಕ್ಯಾನಿಸ್ ಔರೆಸ್ ಇಂಡಿಕಸ್ (Canis aureus indicus) ಎಂದು ಕರೆಯಲಾಗುತ್ತದೆ. ಸಣ್ಣ ಸಸ್ತನಿಗಳಾದ ಇವುಗಳಿಗೆ ಕಪ್ಪು ಮತ್ತು ಬಿಳಿ ಮಿಶ್ರಿತ ತುಪ್ಪಳವಿದ್ದು, ಬೆನ್ನು ಹಾಗೂ ಬಾಲದ ಮೇಲೆ ಕಪ್ಪು ಕೂದಲು ಪ್ರಧಾನವಾಗಿದೆ. ಹೊಟ್ಟೆ, ಎದೆ ಮತ್ತು ಕಾಲುಗಳ ಬದಿಗಳು ಬಿಳಿಯಾಗಿರುತ್ತವೆ. ಸಾಮಾನ್ಯವಾಗಿ ಸತ್ತ ಅಥವಾ ಕೊಳೆತ ಪ್ರಾಣಿಗಳನ್ನು ಸೇವಿಸುವ ಇವುಗಳು ಕೆಲವೊಮ್ಮೆ ಇಲಿಗಳು, ಸರೀಸೃಪಗಳು, ಹಣ್ಣುಗಳು ಮತ್ತು ಕೀಟಗಳನ್ನೂ ಸಹ ಸೇವಿಸುತ್ತವೆ. ಸಣ್ಣ ಗುಂಪುಗಳನ್ನು ರಚಿಸಿ ಜಿಂಕೆ ಮತ್ತು ಹುಲ್ಲೆಗಳನ್ನು ಬೇಟೆಯಾಡುವುದು ವಿಶೇಷವಾಗಿದೆ.

ಕೆಂದಳಿಲು **© ಗುರುಪ್ರಸಾದ್ ಕೆ. ಆರ್.**

ಭಾರತಕ್ಕೆ ಸ್ಥಳೀಯವಾಗಿರುವ ಈ ಅಳಿಲುಗಳು ಎಲೆ ಉದುರುವ ಕಾಡುಗಳು, ತೇವಾಂಶವುಳ್ಳ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುತ್ತವೆ. ಸ್ಕ್ಯೂರಿಡೆ (Sciuridae) ಕುಟುಂಬಕ್ಕೆ ಸೇರುವ ಈ ಸಸ್ತನಿಯನ್ನು ವೈಜ್ಞಾನಿಕವಾಗಿ ರಟುಫಾ ಇಂಡಿಕಾ (Ratufa indica) ಎಂದು ಕರೆಯಲಾಗುತ್ತದೆ. ಮೈಬಣ್ಣವು ಕಡು ಗೆಂಪು ಅಥವಾ ಬೂದು ಬಣ್ಣದ್ದಾಗಿದ್ದು, ಹೊಟ್ಟೆಯ ಮೇಲೆ ಮತ್ತು ತಳಭಾಗದಲ್ಲಿ ಬಿಳಿಯ ಮಚ್ಚೆಗಳನ್ನು ಹೊಂದಿರುತ್ತದೆ. ಬಲಿಷ್ಟ ಮತ್ತು ಉದ್ದನೆಯ ಬಾಲವನ್ನು ಹೊಂದಿದ್ದು, 6 ಮೀಟರ್ ಎತ್ತರಕ್ಕೆ ಜಿಗಿಯಬಲ್ಲ ಸಾಮರ್ಥ್ಯವನ್ನು ಹೊಂದಿದೆ. ನಾಚಿಕೆ ಸ್ವಭಾವದ ಈ ಜೀವಿಗಳು ಮರದ ರಂಧ್ರಗಳಲ್ಲಿ ಅಥವಾ ದೊಡ್ಡ ಗೋಳಾಕಾರದ ಗೂಡುಗಳಲ್ಲಿ ವಿಶ್ರಾಂತಿ ಪಡೆಯುತ್ತವೆ. ಹಣ್ಣುಗಳು, ಹೂವುಗಳು, ಬೀಜಗಳು, ಪಕ್ಷಿಗಳ ಮೊಟ್ಟೆಗಳು ಮತ್ತು ಕೀಟಗಳು ಸೇರಿದಂತೆ ವಿವಿಧ ರೀತಿಯ ಆಹಾರವನ್ನು ಸೇವಿಸುತ್ತವೆ.

ಬೂದು ಮುಂಗುಸಿ © ಗುರುಪ್ರಸಾದ್ ಕೆ. ಆರ್.

ಪಶ್ಚಿಮ ಏಷ್ಯಾ ಮತ್ತು ಭಾರತೀಯ ಉಪಖಂಡದಲ್ಲಿ ಕಂಡುಬರುವ ಈ ಬೂದು ಮುಂಗುಸಿ ಸಾಮಾನ್ಯವಾಗಿ ತೆರೆದ ಕಾಡುಗಳು, ಕುರುಚಲು ಪ್ರದೇಶಗಳು ಮತ್ತು ಕೃಷಿ ಕ್ಷೇತ್ರಗಳಲ್ಲಿ ಕಂಡುಬರುತ್ತದೆ. ಇದು ಬಿಲಗಳು, ಮುಳ್ಳುಗಿಡಗಳು, ಪೊದೆಗಳು, ನೆಡು ತೋಪುಗಳ ನಡುವಿನ ಬಂಡೆಗಳ ಅಡಿಯಲ್ಲಿ ವಾಸಿಸುತ್ತದೆ. ಹರ್ಪೆಸ್ಟಿಡೆ (Herpestidae) ಕುಟುಂಬಕ್ಕೆ ಸೇರುವ ಈ ಸಸ್ತನಿಯನ್ನು ವೈಜ್ಞಾನಿಕವಾಗಿ ಉರ್ವ ಎಡ್ವರ್ಡ್ಸಿ (Urva edwardsii) ಎಂದು ಕರೆಯಲಾಗುತ್ತದೆ. ರೋಮದಿಂದ ಕೂಡಿದ ದೇಹವಿದ್ದು, ಮುಂದೆ ಚಾಚಿಕೊಂಡಂತಹ ಮುಖ ಹಾಗೂ ಪೊದೆಯಂತಿರುವ ಬಾಲವನ್ನು ಹೊಂದಿದೆ. ಇದು ಇಲಿಗಳು, ಹಾವುಗಳು, ಪಕ್ಷಿಗಳ ಮೊಟ್ಟೆಗಳು ಅಥವಾ ಮರಿಗಳು, ಹಲ್ಲಿಗಳು ಮತ್ತು ವಿವಿಧ ಕೀಟಗಳನ್ನು ಬೇಟೆಯಾಡುತ್ತದೆ. ವಿಶೇಷ ತಂತ್ರಗಳನ್ನು ಬಳಸಿಕೊಂಡು ಹಾವುಗಳ ವಿರುದ್ಧ ಹೋರಾಡಿ ಭಕ್ಷಿಸಿ ತಿನ್ನುವ ಕೌಶಲ್ಯವನ್ನು ಹೊಂದಿವೆ. ಇವು ಸುಮಾರು ಒಂದು ಗಂಟೆಗಳ ಕಾಲ ಹಾವನ್ನು ಯುದ್ಧದಲ್ಲಿ ತೊಡಗಿಸುತ್ತವೆ.

ಚಿತ್ರ: ಗುರುಪ್ರಸಾದ್ ಕೆ. ಆರ್.

ಲೇಖನ: ದೀಪ್ತಿ ಎನ್.

ನೀವೂ ಕಾನನಕ್ಕೆ ಬರೆಯಬಹುದು

© ವಿಪಿನ್ ಬಾಳಿಗಾ

ಗಿಳಿಗಳು 350 ಕ್ಕೂ ಹೆಚ್ಚು ವಿವಿಧ ಪ್ರಭೇದಗಳನ್ನು ಒಳಗೊಂಡಿರುವ Psittaciformes ಗಣಕ್ಕೆ ಸೇರಿದ ಪಕ್ಷಿಗಳ ಗುಂಪಾಗಿದೆ. ಅವುಗಳು ತಮ್ಮ ಗಾಢವಾದ ಬಣ್ಣಗಳು, ಬುದ್ಧಿವಂತಿಕೆ ಮತ್ತು ಮಾನವ ಭಾಷೆಯನ್ನು ಅನುಕರಿಸುವ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿವೆ. ಗಿಳಿಗಳು ಪ್ರಪಂಚದಾದ್ಯಂತ ಉಷ್ಣವಲಯದ ಮತ್ತು ಅರೆ ಉಷ್ಣವಲಯದ ಕಾಡುಗಳಲ್ಲಿ ಕಂಡುಬರುತ್ತವೆ. ಹೆಚ್ಚಿನ ಪ್ರಭೇದಗಳು ಮಧ್ಯ ಅಮೇರಿಕಾ, ದಕ್ಷಿಣ ಅಮೇರಿಕಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾಕ್ಕೆ ಸೇರಿದ್ದಾಗಿವೆ. ಅವು ಕೇವಲ 7.5 ಸೆಂಟಿ ಮೀಟರ್‌ಗಳಷ್ಟು ಉದ್ದವಿರುವ ಸಣ್ಣ ಪಿಗ್ಮಿ ಗಿಳಿಯಿಂದ ಹಿಡಿದು 1 ಮೀಟರ್ ಉದ್ದವನ್ನು ತಲುಪಬಹುದಾದ ದೊಡ್ಡ ಹಯಸಿಂತ್ ಮಕಾವ್‌ವರೆಗೆ ವಿವಿಧ ಗಾತ್ರಗಳಲ್ಲಿ ಕಂಡು ಬರುತ್ತವೆ. ಕಾಡಿನಲ್ಲಿ ಗಿಳಿಗಳು ಬೀಜ ಪ್ರಸರಣಕಾರರಾಗಿ ಮತ್ತು ಪರಾಗಸ್ಪರ್ಶಕಗಳಾಗಿ ಪ್ರಮುಖ ಪಾತ್ರಗಳನ್ನು ನಿರ್ವಹಿಸುತ್ತವೆ. ದುರದೃಷ್ಟವಶಾತ್, ಅನೇಕ ಗಿಳಿ ಪ್ರಭೇದಗಳು ಆವಾಸಸ್ಥಾನದ ನಷ್ಟ, ಸಾಕುಪ್ರಾಣಿಗಳ ವ್ಯಾಪಾರಕ್ಕಾಗಿ ಬಲೆಗೆ ಬೀಳುವಿಕೆ ಮತ್ತು ಅವುಗಳ ಗರಿಗಳಿಗಾಗಿ ಬೇಟೆಯಾಡುವಿಕೆಯಿಂದ ಸಂಕಷ್ಟಕ್ಕೆ ಸಿಲುಕಿವೆ. ಗಿಳಿಗಳು ಮತ್ತು ಅವುಗಳ ಆವಾಸಸ್ಥಾನಗಳನ್ನು ರಕ್ಷಿಸಲು ಸಂರಕ್ಷಣಾ ಪ್ರಯತ್ನಗಳು ನಡೆಯುತ್ತಿವೆ, ಆದರೆ ಅವುಗಳ ಬದುಕುಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಹೆಚ್ಚಿನ ಕೆಲಸದ ಅಗತ್ಯವಿದೆ. ಹಾಗಾಗಿ ಮೇ 31 ರಂದು ಅಂತರಾಷ್ಟ್ರೀಯ ಗಿಳಿಗಳ ದಿನವೆಂದು ಆಚರಿಸಲಾಗುತ್ತದೆ.

ಇದೇ ರೀತಿಯ ಮಾಹಿತಿಗಳನ್ನು ನೀಡಲು ನೀವೂ ಕಾನನಕ್ಕೆ ಬರೆಯಬಹುದು. ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

ಕಾನನ ಪತ್ರಿಕೆಯ ಇ-ಮೇಲ್ ವಿಳಾಸ: kaanana.mag@gmail.com
ಅಂಚೆ ವಿಳಾಸ:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.